ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.
ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ
55,000 Plus readers
Place Your Ads
Reach New Audience
9448633038
hampitimes@gmail.com
Valmiki Circle, Hosapete-583201

ಸಂಪುಟ:01 • ಸಂಚಿಕೆ:289 • ನೋಂದಣಿ ನಂ.:KARKAN27911 • ವಿಜಯನಗರ • 16.04.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:289 • Reg.No:KARKAN27911 • VIJAYANAGARA • 16.04.2024 • Tuesday • Page:04 • Rs:2

ನಮ್ಮ ನಡೆ ಮತದಾನದ ಕಡೆ | ಮೇ 7 ನೆನಪಿರಲಿ

ವಿಫಲ ಕೊಳವೆಬಾವಿ ಮುಚ್ಚಿರಿ : ಡಿಸಿ ದಿವಾಕರ ಸೂಚನೆ

■ ಹಂಪಿ ಟೈಮ್ಸ್ ಹೊಸಪೇಟೆ

ಅನಧಿಕೃತ ಕೊಳವೆಬಾವಿಗಳು ಹಾಗೂ ವಿಫಲ ಕೊಳವೆಬಾವಿಗಳನ್ನು ಮುಚ್ಚಲು ಕೂಡಲೇ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಜಿಲ್ಲೆಯ ಎಲ್ಲಾ ತಾಲೂಕುಗಳ ತಹಸೀಲ್ದಾರ್‌ಗಳು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಬಳಕೆಯಾಗದೇ ಇರುವ ಕೊಳವೆಬಾವಿಗಳಿಂದ ಆಗುವ ಅಪಾಯ ತಡೆಗಟ್ಟುವ ಹಾಗೂ ಕುಡಿಯುವ ನೀರಿನ ಲಭ್ಯತೆ ಬಗ್ಗೆ ಏಪ್ರಿಲ್ 15ರಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜನರಿಗೆ ವಿಫಲ ಕೊಳವೆಬಾವಿಗಳನ್ನು ವ್ಯವಸ್ಥಿತವಾಗಿ ಮುಚ್ಚಲು ನಿರ್ದೇಶನ ನೀಡಬೇಕು. ವಿಫಲ ಕೊಳವೆಬಾವಿಗಳಿಂದ ಜನರಿಗೆ ತೊಂದರೆಯಾಗದಂತೆ ಸಂಪೂರ್ಣವಾಗಿ ಮುಚ್ಚಲು ತಿಳಿಸಬೇಕು. ಜಿಲ್ಲೆಯಲ್ಲಿ ಇರುವ

ಅನಧೀಕೃತ ಕೊಳವೆಬಾವಿಗಳನ್ನು ಮುಚ್ಚಿರುವುದನ್ನು ಪತ್ರದ ಮೂಲಕ ಖಾತ್ರಿಪಡಿಸಿಕೊಳ್ಳಬೇಕು. ಜಿಲ್ಲೆಯಲ್ಲಿ ಯಾವುದೇ ಸ್ಥಳದಲ್ಲಿ ಕೊಳವೆಬಾವಿ ಕೊರೆಯಲು ನೋಂದಣಿ ಮಾಡಿಸುವುದನ್ನು ಕಡ್ಡಾಯಗೊಳಿಸಬೇಕು. ಅನಧೀಕೃತ ಕೊಳವೆಬಾವಿಗಳನ್ನು ಕೊರೆದರೆ ಅವರುಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ 525 ಕೊಳವೆಬಾವಿಗಳು, ಕೊಟ್ಟೂರು ತಾಲೂಕಿನಲ್ಲಿ 264, ಹರಪ್ಪನಹಳ್ಳಿ ತಾಲೂಕಿನಲ್ಲಿ 1149, ಹೂವಿನಹಡಗಲಿ ತಾಲೂಕಿನಲ್ಲಿ 507, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 294, ಹೊಸಪೇಟೆ ತಾಲೂಕಿನಲ್ಲಿ 292 ಕೊಳವೆಬಾವಿಗಳಿವೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಜಿಲ್ಲೆಯ ಎಲ್ಲಾ ಕಡೆಗಳಲ್ಲಿನ ಕೆಲವು ವಿಫಲ ಕೊಳವೆಬಾವಿಗಳನ್ನು ಮುಚ್ಚಲು ಈಗಾಗಲೇ ಎಲ್ಲ ರೀತಿಯ ಕ್ರಮ ವಹಿಸಲಾಗಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಬರ ನಿರ್ವಹಣೆ: ಹೊಸಪೇಟೆ ನಗರ ಸೇರಿದಂತೆ ಪಟ್ಟಣ ಪ್ರದೇಶ ಮತ್ತು ಜಿಲ್ಲೆಯ ಎಲ್ಲಾ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಬರ ನಿರ್ವಹಣೆಯ ಕ್ರಮದ ಬಗ್ಗೆ ಜಿಲ್ಲಾಧಿಕಾರಿಗಳು ಪರಿಶೀಲಿಸಿದರು.

ವಿಜಯನಗರ ಜಿಲ್ಲೆಯು ಈಗಾಗಲೇ ಬರಪೀಡಿತ ಜಿಲ್ಲೆ

ಹಂಪಿ ಟೈಮ್ಸ್ ಏ.14, 2024

ಹಂಪಿ ಟೈಮ್ಸ್
ಸಂ|ಪಾ|ದ|ಕೀ|ಯ

ಮೃತ್ಯುಂಜಯನಾದ ಸಾತ್ವಿಕ್ ಘಟನೆ ಮರುಕಳಿಸದಿರಲಿ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಲಚ್ಯಾಣ ಗ್ರಾಮದಲ್ಲಿ ಕೊಳವೆಬಾವಿಗೆ ಮಗು ಬಿದ್ದ ಪ್ರಕರಣ ರಾಜ್ಯದಲ್ಲಿ ಇದೇ ಮೊದಲಲ್ಲ. ಆದರೆ, ಇದೇ ಕೊನೆ ಪ್ರಕರಣ ಆಗಲಿ ಎಂಬುದು ನಮ್ಮ ಆಶಯ. ಇದಕ್ಕೆ ಸರ್ಕಾರದ ಕಠಿಣ ನಿಯಮಗಳು ಅಷ್ಟೇ ಸಾಕಾಗುವುದಿಲ್ಲ. ಇದರೊಂದಿಗೆ ಕೊಳವೆಬಾವಿ ತೋಡಿಸಿದವರ ಇಚ್ಛಾಶಕ್ತಿಯೂ ಅತ್ಯಗತ್ಯ. ವಿಜಯಪುರ

ಎಂದು ಘೋಷಿತವಾಗಿದೆ. ಬೇಸಿಗೆಯ ಬಿಸಿಲು ದಿನೇದಿನೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಕಡೆಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರು ಪೂರೈಕೆ ಮತ್ತು ಜಾನುವಾರುಗಳಿಗೆ ಮೇವು ಪೂರೈಕೆಯಲ್ಲಿ ಯಾವುದೇ ರೀತಿಯಲ್ಲಿ ವ್ಯತ್ಯಯವಾಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಎಲ್ಲ ತಹಸೀಲ್ದಾರಗಳು ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕೃಷಿ, ಪಶುಪಾಲನೆ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲೆಯ ಕೆಲವೆಡೆ ಮಳೆಯಾದ ಬಗ್ಗೆ ವರದಿಯಾಗಿದೆ. ಆದಾಗ್ಯೂ ಜಾನುವಾರುಗಳಿಗೆ ಮೇವು ಪೂರೈಕೆಯ ವಿಷಯದ ಬಗ್ಗೆ ನಿರ್ಲಕ್ಷ್ಯ ವಹಿಸಬಾರದು. ಯಾವುದೇ ತಾಲೂಕಿನಲ್ಲಿ ಮೇವಿನ ಕೊರತೆ ಕಂಡುಬಂದರೆ ಕೂಡಲೇ ಮೇವು ದಾಸ್ತಾನಿಗೆ ವ್ಯವಸ್ಥೆ ಮಾಡಬೇಕು. ನೀರಿನ ಅಭಾವ ಎದುರಾಗದಂತೆ ನೀರನ್ನು ಮಿತವಾಗಿ ಬಳಸಲು ಸಾರ್ವಜನಿಕರಿಗೆ ಜನಜಾಗೃತಿ ಮತ್ತು ಮನವರಿಕೆ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಷಾ ಮತ್ತು ಜಿಲ್ಲೆಯ ಎಲ್ಲಾ ತಾಲೂಕುಗಳ ತಹಸೀಲ್ದಾರ್‌ಗಳು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಕ್ರೋ ನ್ಯೂಸ್

ಸುದ್ದಿ, ಜಾಹೀರಾತು ಕಚೇರಿ

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com

ಅರ್ಹರನ್ನು ಆಯ್ಕೆ ಮಾಡಲು ಕಡ್ಡಾಯವಾಗಿ ಮತದಾನ ಮಾಡಿ

ಹಂಪಿ ಟೈಮ್ಸ್ ಕೊಟ್ಟೂರು

ಅರ್ಹರನ್ನು ಆಯ್ಕೆ ಮಾಡಲು ಪ್ರತಿಯೊಬ್ಬರು ಮತದಾನ ಮಾಡಬೇಕು ಎಂದು ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ ಹೇಳಿದರು.

ತಾಲೂಕಿನ ಹ್ಯಾಳ್ಯಾ ಗ್ರಾಮ ಪಂಚಾಯತಿ ವ್ಯಾಪ್ತಿಯ ನರೇಗಾ ಯೋಜನೆಯಡಿ ಲೊಟ್ಟಿನಕೆರೆ, ಕೆರೆಯಲ್ಲಿ ಹೂಳು ಎತ್ತುವ ಕಾಮಗಾರಿ ವೀಕ್ಷಿಸಿ ಸ್ಥಳದಲ್ಲಿ ಏರ್ಪಡಿಸಿದ್ದ ಸ್ವೀಪ್ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತ ಇಡೀ ಪ್ರಪಂಚದಲ್ಲೇ ಬಹುದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದು.18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಬೇಕು. ಮೇ 7 ರಂದು ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನದ ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಎತ್ತಿ ಹಿಡಿಯಬೇಕು ಎಂದು ಜಾಗೃತಿ ಮೂಡಿಸಿದರು.

85 ವರ್ಷ ಮೇಲ್ಪಟ್ಟವರಿಗೆ ಮತ್ತು ಅಂಗವಿಕಲ ಮತದಾನ ಕೇಂದ್ರಕ್ಕೆ ಹೋಗಲು ಆಗದಿದ್ದರೆ ಮನೆಯಲ್ಲಿಯೇ ಓಟ ಮಾಡಬಹುದು ,ನರೇಗ ಕೂಲಿಕಾರರು ಕೆಲಸ ಮುಗಿಸಿಕೊಂಡು ಬಂದು ಓಟ ಮಾಡಬೇಕು ಎಂದು ಹೇಳಿದರು.

ಈ ವೇಳೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿಎಚ್‌ಎಂ ಗಂಗಾಧರ ಮಾತನಾಡಿ ಮೇ 7 ರಂದು ಬೆಳಿಗ್ಗೆ ನರೇಗಾ ಕೂಲಿ ಕೆಲಸಕ್ಕೆ ಹಾಜರಾಗಿ ಬೇಗ ಕೆಲಸ ಮುಗಿಸಿಕೊಂಡು ಬಂದು ಮತದಾನ ಮಾಡಬೇಕು ಎಂದು ತಿಳಿಸಿ, ಮತದಾನ ಮಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಮತದಾನ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ನೂರಾರು ಕೂಲಿ ಕಾರ್ಮಿಕರು ಹಾಗೂ ಗ್ರಾಪಂ ಸಿಬ್ಬಂದಿಗಳು ಇದ್ದರು.

ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ

ವಿಜಯನಗರ ಕಾಲೇಜಿಗೆ ಎನ್.ಮಲ್ಲಿಕಾರ್ಜುನ ಮೆಟ್ರಿ , ಪಿಡಿಐಟಿ ಕಾಲೇಜಿಗೆ ಬಾದಾಮಿ ಕರಿಬಸವರಾಜ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ವೀರಶೈವ ವಿದ್ಯಾವರ್ಧಕ ಸಂಘದ ವಿಜಯನಗರ ಮಹಾವಿದ್ಯಾಲಯದ ಆಡಳಿತ ಮಂಡಳಿ ನೂತನ ಅಧ್ಯಕ್ಷರಾಗಿ ಎನ್.ಮಲ್ಲಿಕಾರ್ಜುನ ಮೆಟ್ರಿ ಮತ್ತು ಪ್ರೌಢದೇವರಾಯ ಇಂಜಿನಿಯರಿಂಗ್ ಹಾಗೂ ಬಾಬು ಲಾಲ್ ನಾಹರ್ ಬಿ.ಇಡಿ ಕಾಲೇಜಿಗೆ ಬಾದಾಮಿ ಕರಿಬಸವರಾಜ್ ಸೋಮವಾರ ಮುಂದಿನ ಮೂರು ವರ್ಷದ ಅವಧಿಗೆ ಅಧಿಕಾರ ವಹಿಸಿಕೊಂಡರು.

ನಗರದ ವಿಜಯನಗರ ಮಹಾವಿದ್ಯಾಲಯದಲ್ಲಿ ಕಾಲೇಜಿನ ನಿಕಟಪೂರ್ವ ಅಧ್ಯಕ್ಷ ಅಸುಂಡಿ ಬಿ.ನಾಗರಾಜಗೌಡ ನೂತನ ಅಧ್ಯಕ್ಷ ಮೆಟ್ರಿ ಮಲ್ಲಿಕಾರ್ಜುನರಿಗೆ ಅಧಿಕಾರ ಹಸ್ತಾಂತರಿಸಿ, ಈವರೆಗೂ ನನಗೆ ಸಹಕಾರ ನೀಡಿದಂತೆ ಕಾಲೇಜಿನ ಪ್ರಗತಿಗಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೂತನ ಅಧ್ಯಕ್ಷರಿಗೆ ಸಹಕಾರ ನೀಡಬೇಕೆಂದು ಕೋರಿದರು.

ಪ್ರಾಧ್ಯಾಪಕ ಡಾ.ಮೃತ್ಯುಂಜಯ ರುಮಾಲೆ ಮಾತನಾಡಿ, ವಿಜಯನಗರ ಕಾಲೇಜಿನಲ್ಲೇ ಶಿಕ್ಷಣ ಪಡೆದು, ಇದೇ ಕಾಲೇಜಿನ ಅಡಳಿತ ಮಂಡಳಿ ಅಧ್ಯಕ್ಷರಾಗಿರುವುದು ಹೆಮ್ಮೆಯ ಸಂಗತಿ. ಕಾಲೇಜಿನ ಹಳೇ ವಿದ್ಯಾರ್ಥಿ ಕಾಲೇಜಿನ ಸರ್ವತೋಮುಖ ಪ್ರಗತಿಗೆ ಶ್ರಮಿಸಲಿ. ಕಾಲೇಜಿನ ನೂತನ ಅಧ್ಯಕ್ಷರಾಗಿ ಸಾಂಕೇತಿಕವಾಗಿ ಅಧಿಕಾರವಹಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲರ ಸಮ್ಮುಖದಲ್ಲಿ ಪದಗ್ರಹಣ ಮಾಡಲಿದ್ದಾರೆ ಎಂದರು.

ಪಿಯುಸಿ ಪ್ರಾಂಶುಪಾಲ ಎಚ್.ಎಂ.ನಿರಂಜನ ಸೇರಿದಂತೆ ಪದವಿ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಸನ್ಮಾನಿಸುವ ಮೂಲಕ ಸ್ವಾಗತಕೋರಿದರು. ಸಮಾಜದ ಮುಖಂಡರಾದ ಎಲ್ ಬಸವರಾಜ, ನಂದೀಶ, ಫಾಲಾಕ್ಷರೆಡ್ಡಿ ಸೇರಿದಂತೆ ಇತರರು ಸಹಿ ತಿನಿಸಿ ಶುಭಕೋರಿದರು.



ಹೊಸಪೇಟೆ ವಿಜಯನಗರ ಕಾಲೇಜಿನ ನಿಕಟಪೂರ್ವ ಅಧ್ಯಕ್ಷ ಅಸುಂಡಿ ಬಿ.ನಾಗರಾಜಗೌಡ ನೂತನ ಅಧ್ಯಕ್ಷ ಮೆಟ್ರಿ ಮಲ್ಲಿಕಾರ್ಜುನರಿಗೆ ಅಧಿಕಾರ ಹಸ್ತಾಂತರಿಸಿದರು. ಕಾಲೇಜಿನ ಸಿಬ್ಬಂದಿ, ಸಮಾಜದ ಮುಖಂಡರು ಇದ್ದರು.



ವೀ.ವಿ. ಸಂಘದ ವಿವಿಧ ಕಾಲೇಜುಗಳಿಗೆ ಅಧ್ಯಕ್ಷರ ಆಯ್ಕೆ

ಅಖಂಡ ಬಳ್ಳಾರಿ ಜಿಲ್ಲೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ವೀರಶೈವ ವಿದ್ಯಾವರ್ಧಕ ಸಂಘದ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗೆ ಅಧ್ಯಕ್ಷರನ್ನು ಭಾನುವಾರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ. ವೈ.ಮಹಾಬಲೇಶ್ವರಪ್ಪ ಇಂಜಿನಿಯರಿಂಗ್ ಕಾಲೇಜಿಗೆ ಸಂಘದ ಉಪಾಧ್ಯಕ್ಷ ಜಾನೆಕುಂಟೆ ಬಸವರಾಜ, ಹೊಸಪೇಟೆಯ ಪ್ರೌಢದೇವರಾಯ ಇಂಜಿನಿಯರಿಂಗ್ ಹಾಗೂ ಬಾಬು ಲಾಲ್ ನಾಹರ್ ಬಿ.ಇಡಿ ಕಾಲೇಜಿಗೆ ಬಾದಾಮಿ ಕರಿಬಸವರಾಜ್ ಆಯ್ಕೆಯಾದರು. ಎಸ್.ಕೆ.ಮೋದಿ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಏಳುಬೆಂಚಿ ರಾಜಶೇಖರ, ವೀರಶೈವ ಕಾಲೇಜಿಗೆ ದರೂರು ಶಾಂತನಗೌಡ, ಅಲ್ಲಂ ಸುಮಂಗಳಮ್ಮ ಕಾಲೇಜಿಗೆ ಕಾತ್ಯಾಯಿನಿ ಮರಿದೇವಯ್ಯ, ವುಂಕಿ ಸಣ್ಣ ರುದ್ರಪ್ಪ ಕಾಲೇಜಿಗೆ ಟಿ.ನರೇಂದ್ರಬಾಬು, ಕೊಟ್ಟೂರು ಸ್ವಾಮಿ ಬಿ.ಇಡಿ ಕಾಲೇಜಿಗೆ ಹಟ್ಟೋಳಿ ಶರಣನಗೌಡ, ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ಕಾಲೇಜಿಗೆ ಪಲ್ಲೇದ್ ಪ್ರಭು, ತೊಗರಿ ವೀರಮಲ್ಲಪ್ಪ ಔಷಧದ ವಿಜ್ಞಾನ ಕಾಲೇಜಿಗೆ ಎಲ್.ಟಿ.ಶೇಖರ್, ಹೊಸಪೇಟೆ ವಿಜಯನಗರ ಕಾಲೇಜಿಗೆ ಮೆಟ್ರಿ ಮಲ್ಲಿಕಾರ್ಜುನ, ಹಡಗಲಿಯ ಜಿ.ಬಿ.ಆರ್.ಕಾಲೇಜಿಗೆ ಹೊರಕನಹಳ್ಳಿಯ ಮೋಹನರೆಡ್ಡಿ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಉಳಿದ ಕಾಲೇಜುಗಳ ಜವಾಬ್ದಾರಿಯನ್ನು ಸಂಘದ ಅಧ್ಯಕ್ಷ ಗುರುಬಸವರಾಜ್ ಅವರಿಗೆ ವಹಿಸಲಾಗಿದೆ ಎಂದು ತಿಳಿಸಲಾಗಿದೆ.

ಹೊಸಪೇಟೆಯಲ್ಲಿ ಸಿಇಟಿ ಪರೀಕ್ಷೆ

ಡಿಸಿ ಎಂ.ಎಸ್.ದಿವಾಕರ ಆದೇಶ | ಪರೀಕ್ಷೆಗಳು ಶಾಂತಿಯುತವಾಗಿ ನಡೆಯಲು ನಿಷೇದಾಜ್ಞೆ ಜಾರಿ

ಸಿಇಟಿ ಪರೀಕ್ಷೆ ಏ.18 ಮತ್ತು 19 ರಂದು ಬೆಳಿಗ್ಗೆ 10.30 ರಿಂದ ಸಂಜೆ 3.50ರವರೆಗೆ ನಡೆಯಲಿವೆ.

■ ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಎಂಜಿನಿಯರಿಂಗ್ ಕೃಷಿ ವಿಜ್ಞಾನ, ವೆಟರ್ನರಿ, ಫಾರ್ಮಸಿ ಹಾಗೂ ಬಿಎಸ್ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಸಿಇಟಿ ಪರೀಕ್ಷೆಯು ಏಪ್ರಿಲ್ 18 ಮತ್ತು 19ರಂದು ನಡೆಯಲಿದ್ದು, ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಎಂ.ಎಸ್ ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ವಿವಿಧ ವೃತ್ತಿಪರ ಕೋರ್ಸುಗಳಿಗೆ ಪ್ರವೇಶಾತಿಯ ಸಿಇಟಿ ಪರೀಕ್ಷೆಯು ಏ.18 ಮತ್ತು 19ರ ಬೆಳಿಗ್ಗೆ 10.30 ರಿಂದ ಸಂಜೆ 3.50ರವರೆಗೆ ಜಿಲ್ಲೆಯ ಹೊಸಪೇಟೆ ನಗರದ ಒಟ್ಟು 7 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಇಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರ್ನರಿ, ಫಾರ್ಮಸಿ ಹಾಗೂ ಬಿಎಸ್ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ಪರೀಕ್ಷೆಗಳು ಸುಸೂತ್ರವಾಗಿ ಮತ್ತು ದೋಷರಹಿತವಾಗಿ ನಡೆಸಲು ಅನುಕೂಲವಾಗುವಂತೆ ಹಾಗೂ ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ಸಿ.ಆರ್.ಪಿ.ಸಿ 1973 ಕಲಂ 144ರನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ವಿವಿಧ ಷರತ್ತಿಗೆ ಒಳಪಟ್ಟು ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸದಂತೆ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್‌ಗಳು ಕಾರ್ಯನಿರ್ವಹಿಸದಂತೆ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಪತ್ರ ಪಡೆದ ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ಈ ಆದೇಶವು ಸದರಿ ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿಗೆ ಅನ್ವಹಿಸುವುದಿಲ್ಲ ಎಂದು ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಎಂ.ಎಸ್ ದಿವಾಕರ ತಿಳಿಸಿದ್ದಾರೆ.

7 ಪರೀಕ್ಷಾ ಕೇಂದ್ರಗಳು

- ವಿಜಯನಗರ ಪಿಯು ಕಾಲೇಜ್
- ಸರ್ಕಾರಿ ಬಾಲಕಿಯರ ಪಿಯು ಕಾಲೇಜ್ ರೈಲ್ವೆ ಸ್ಟೇಷನ್ ರೋಡ್
- ಸರಕಾರಿ ಪಿಯು ಕಾಲೇಜ್ ಟಿಬಿ ಡ

ಬೆಳಕಿನ ಹಾದಿ

ಶ್ರೀರಾಮನ ಆದರ್ಶಗಳ ಅನುಪಾಲನೆ ಸರ್ವಕಾಲಿಕ

ಮನುಜ ಕುಲದ ಮನ್ವಂತರದ ಆದಶ9 ಮಾದರಿ ವ್ಯಕ್ತಿತ್ವದ ಪ್ರಭು ಶ್ರೀರಾಮನ ಬಹುಮುಖಿ ವ್ಯಕ್ತಿತ್ವ ವಣ9ನಾತೀತ ವಾದದ್ದು.ಪ್ರಭು ಶ್ರೀರಾಮನು ಪ್ರತಿಪಾದಿಸಿದ ವಿನಯ,ವಿವೇಕ, ಪಿತೃ ವಾಕ್ಯ ಪರಿಪಾಲನೆ, ವಾತ್ಸಲ್ಯ ಸಹೋದರತೆ,ಸ್ನೇಹಪರತೆ,ಸಜ್ಜನರ ರಕ್ಷಣೆ, ಧರ್ಮಾನುಸರಣೆ, ಕಾರುಣ್ಯ ಸಿಂಧು ಮುಂತಾದ ಮಾನವೀಯ ಮೌಲ್ಯಗಳುಳ್ಳ ಆದರ್ಶ ಪ್ರಾಯ ಸದ್ಗುಣಗಳು ಸದಾ ಕಾಲಕ್ಕೂ ಅಜರಾಮರವಾಗಿದ್ದು ಇಡೀ ಮನುಜಕುಲ ಈ ತತ್ವಾದರ್ಶಗುಣಗಳ ಅನುಪಾಲನೆ, ಅನುಕರಣೆ ಮುಖೇನ ಸಾರ್ಥಕ ಬದುಕು ಕಂಡುಕೊಳ್ಳಲು ಇರುವ ಸತ್ಪಥದ ದಿವ್ಯ ಜ್ಯೋತಿಗಳಾಗಿವೆ.

ಶ್ರೀರಾಮನು ನಡೆದು–ನುಡಿದು ಬಂದ ಒಂದೊಂದು ದೃಷ್ಟಾಂತವು ಮನ ಪರಿವರ್ತನೆಯ ಪ್ರತೀಕವಾದದ್ದು. ಶ್ರೀ ರಾಮನು ವನವಾಸಕ್ಕೆ ತೆರಳಿದಾಗ ಅದನರಿತು ಸಹೋದರ ಭರತನು ವನವಾಸದಲ್ಲಿರುವ ರಾಮನನ್ನು ಭೇಟಿಯಾಗಿ ಅಯೋಧ್ಯೆಗೆ ಹಿಂತಿರುಗಿ ಸಾಮ್ರಾಜ್ಯಕ್ಕೆ ನೀನೇ ಅಧಿಪತಿಯಾಗು ಎಂದು ಪರಿ ಪರಿಯಾಗಿ ಕೋರಿದಾಗ ಭರತನ ಕೋರಿಕೆಯನ್ನು ನಯವಾಗಿ ತಿರಸ್ಕರಿಸಿದ ಶ್ರೀರಾಮನು ತನ್ನ ತಂದೆ ದಶರಥನಿಗೆ ಕೊಟ್ಟ ಮಾತಿನಂತೆ ವನವಾಸ ಮುಗಿಸಿ ಅಯೋಧ್ಯೆಗೆ ಮರಳುವುದಾಗಿ ಹೇಳುವ ಶ್ರೀರಾಮನ ಪಿತೃ ವಚನಕ್ಕೆ ಬದ್ಧನಾದ ವಿಶಿಷ್ಟ ಗುಣ ಸದಾ ಕಾಲಕ್ಕೂ ಪ್ರಸ್ತುತವಾಗಿದ್ದು ಯುವಪೀಳಿಗೆಗೆ ಮಾದರಿಯಾದ ಸದಾ ಅನುಕರಣೀಯ ಮನ್ವಂತರದ ಗುಣವಾಗಿದೆ.

ಹಾಗೇನೇ ವಯೋವೃದ್ಧೆ ಶಬರಿ ರಾಮನ ದರ್ಶನಕ್ಕಾಗಿ ಕಾದು ನಿಂತಾಗ ಶಬರಿಯ ಬಯಕೆ ಈಡೇರಿಕೆಗಾಗಿ ಆಕೆ ನೆಲೆಸಿದ್ದ ಆಶ್ರಮಕ್ಕೆ ತೆರಳುವ ಶ್ರೀರಾಮನು ಶಬರಿಗೆ ತನ್ನ ದರ್ಶನಭಾಗ್ಯ ಕರುಣಿಸಿ ಆಕೆ ತಿಂದ ಎಂಜಲು ಎಲಚಿ ಹಣ್ಣನ್ನು ಆತಿಥ್ಯ ರೂಪದಲ್ಲಿ ಸ್ವೀಕರಿಸಿ ಅದನ್ನು ಸೇವಿಸಿ ಶಬರಿಯ ಬಯಕೆ ಈಡೇರಿಸಿ ಶಬರಿಗೆ ಮುಕ್ತಿ ಕರುಣಿಸಿದ ಬಹು ಮಾತೃಮಮತೆಯುಳ್ಳ ಕರುಣೆಯ ಕಡಲಿನ ಗುಣ ಮನುಜ ಕುಲವಾದ ನಮಗೆಲ್ಲ ದಾರಿದೀಪವಾದದ್ದು.

ಹಿರಿಯರ ಕಡೆಗಣಿಸುವ ಕಿರಿಯರಿಗೆ ಸದಾ ಕಾಲಕ್ಕೂ ಆದಶ9ಪ್ರಾಯವಾದದ್ದು. ಹಿರಿಯರಿಗೆ, ದೊಡ್ಡವರಿಗೆ ಗೌರವ ನೀಡದ ದಡ್ಡತನ ಗುಣಕ್ಕೆ ಅಂಕುಶವಾದದ್ದು ಶ್ರೀರಾಮನ ಗುಣ.

ರಾವಣನು ಸೀತೆಯನ್ನು ಅಪಹರಿಸಿಕೊಂಡು ಪುಷ್ಪಕ ವಿಮಾನದಲ್ಲಿ ಕೊಂಡೊಯ್ಯುವಾಗ ರಾವಣನಿಂದ ಸೀತೆಯನ್ನು ಕಾಪಾಡಲು ಹರಸಾಹಸ ಪಡುವ ಪಕ್ಷಿ ರಾಜ ಜಟಾಯು ರಾವಣನಿಂದ ತನ್ನ ರೆಕ್ಕೆಗಳನ್ನು ಕತ್ತರಿಸಿಕೊಂಡು ಹತನಾದಾಗ ಕಾರುಣ್ಯ ಸಿಂಧುನಾದ ಶ್ರೀರಾಮನೇ ಜಟಾಯುವಿನ ಅಂತ್ಯಸಂಸ್ಕಾರ ಮಾಡಿ ಸದ್ಗತಿ ನೀಡಿದ ಶ್ರೀರಾಮನ ಸರ್ವಭೂತಹಿತ ಆದರ್ಶಗುಣ ನಮಗೆಲ್ಲ ಆದರ್ಶಪ್ರಾಯ ವಾದದ್ದು. ಪ್ರಾಣಿಹಿಂಸೆ, ಹನನ ಮಾಡುವ ನರರಿಗೆ ಅವುಗಳ ವರ್ಜ್ಯನೆಗೆ ಶ್ರೀರಾಮನ ಪ್ರಾಣಿ ಪಕ್ಷಿಗಳ ದಯಾಗುಣ ಸದಾ ಅನುಕರಣೀಯವಾಗಿದೆ.

ಶ್ರೀರಾಮನ ಬಹುಮುಖಿ ಮಾದರಿ ವ್ಯಕ್ತಿತ್ವ ಕಾಲ, ದೇಶ, ಧರ್ಮಾತೀತವಾಗಿದ್ದು ಆತನು ಪಾಲಿಸಿದ ಸದಾಚಾರ, ದಯಾನಿಧಿ, ಕ್ಷಮಾಗುಣ, ಸತ್ಯಸಂಧತೆ, ಸಹೋದರತೆ, ವೀರತ್ವ ಸದ್ಗುಣಗಳು ನಮಗೆ ಸದಾ ಕಾಲಕ್ಕೂ ಸ್ಫೂರ್ತಿ ಸೆಲೆಗಳಾಗಿದ್ದು ಇಡೀ ಮನುಜ ಕುಲವನ್ನು ಸದಾ ಮುನ್ನಡೆಸುವ ಪ್ರಖರ ಪ್ರಕಾಶದ ಪ್ರಜ್ವಲ ನಂದಾದೀಪಗಳಾಗಿವೆ.

– **ಎಸ್.ಎಚ್.ಸೋಮಶೇಖರ**, ಮಾಗಳ

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಬೆಳಕಿನ ಹಾದಿ: ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

ಕ್ರೀಡಾಸಾಧಕರತ್ತ ಕಣ್ತೆರೆಯುವುದೇ ಕ್ರೀಡಾ ಇಲಾಖೆ? ಕರ್ನಾಟಕದ ಕ್ರೀಡಾ ಬಾಹುಬಲಿ ರಾಘವೇಂದ್ರ.ಪಿ

ಮನಸ್ಸು ಸದೃಢವಾಗಿದ್ದರೆ, ಸಾಧಿಸುವ ಛಲವಿದ್ದರೆ ಯಾವ ಕ್ಷೇತ್ರದಲ್ಲಾದರೂ ಸಾಧನೆಯನ್ನು ಮಾಡಬಹುದು ನಾವೇಳ ಹೊರಟಿರುವ ಸಾಧಕರೆ ಪಿ.ರಾಘವೇಂದ್ರ.

ಬೆಂಗಳೂರು ಕಮಲಾನಗರದ ಪುಟ್ಟಸ್ವಾಮಿ ಹಾಗೂ ಶಾಂತಮ್ಮ ದಂಪತಿಗಳಿಗೆ 4–1–1984 ರಂದು ಜನಿಸಿದ ಮಗು ಮುಂದೊಮ್ಮೆ ದೇಶಕ್ಕೆ ಕೀರ್ತಿ ತರುವ ಕ್ರೀಡಾಕುಸುಮವಾಗುತ್ತದೆ ಎಂದಾರಿಗೂ ಊಹಿಸಿರಲು ಸಾಧ್ಯವಿಲ್ಲ. 7ನೇ ವಯಸ್ಸಿಗೆ ಬಂದ ಅನಾರೋಗ್ಯ ಸಮಸ್ಯೆ ಇವರೇರಡು ಕಾಲುಗಳ ಸ್ವಾಧೀನವನ್ನು ಬಲಿ ಪಡೆಯುತ್ತದೆ.

ಚಿಕಿತ್ಸೆಯಲ್ಲಿನ ವ್ಯತ್ಯೆಯ ಇದಕ್ಕೆಲ್ಲ ಕಾರಣ, ಮುಂದಿನ ಹೆಚ್ಚುವರಿ ಚಿಕಿತ್ಸೆಗಳು ಫಲ ನೀಡಲಿಲ್ಲ. ತಂದೆ ಮಗನ ಆರೈಕೆ ನಿಲ್ಲಿಸದೆ ನಿತ್ಯ ತೈಲಮಜ್ಜನ, ಸೊಂಟದ ಮೇಲಿನ ಅಂಗಾಂಗಗಳು ಸದೃಢಗೊಳಿಸಲು ಡಬಲ್ ಬಾರ್ ವ್ಯಾಯಾಮ ಮಾಡಿಸಲು ತೊಡಗಿದರು ಇದು ಮುಂದೆ ದೇಹದಾಢ್ಯಪಟುವಾಗಲು ನೆರವಾಯಿತು.

2002 ರಲ್ಲಿ ತಂದೆ ಅಪಘಾತದಲ್ಲಿ ತೀರಿಕೊಳ್ಳುತ್ತಾರೆ ಅನುಕಂಪದ ಆಧಾರದ ಮೇಲೆ ಔಷದ ನಿಯಂತ್ರಣ ಇಲಾಖೆ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ಉದ್ಯೋಗವನ್ನು ಪಡೆಯುತ್ತಾರೆ. ದೇಹದಾಢ್ಯ ತರಬೇತಿಯಲ್ಲಿ ತೊಡಗಿದ ಇವರಿಗೆ ವೆಚ್ಚಗಳನ್ನು ಸರಿದೂಗಿಸಲಾಗದೆ ಕ್ರೀಡೆಯಿಂದ ಹೂರಗೊಳಿಯುತ್ತಾರೆ.

ರಾಜ್ಯಮಟ್ಟದ ಹಲವಾರು ದೇಹದಾಢ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರದರ್ಶನವನ್ನು ನೀಡಲು ಸಹಕಾರ ನೀಡಿದ್ದೆ ಸ್ನೇಹಿತ ಪ್ರದೀಪ್ ಇವರು ಹೊಸದಾಗಿ ತೆರೆದ ಜಿಮ್ ನಲ್ಲಿ 3 ತಿಂಗಳ ಕಠಿಣ ತರಬೇತಿ ನೀಡಿ ಅಂಗವಿಕಲರ ದೇಹದಾಢ್ಯ ಸ್ಪರ್ಧೆಯಲ್ಲಿ ಮೊದಲ ಬಾರಿಗೆ ಬೆಳ್ಳಿ ಪದಕವನ್ನು ಗಳಿಸುವಂತೆ ಇವರನ್ನು ಸಿದ್ಧಗೊಳಿಸುತ್ತಾರೆ ಇದರ ಫಲ 5 ಪ್ರತಿಷ್ಠಿತ ಸ್ಪರ್ಧೆಗಳಲ್ಲಿ ಭಾಗವಹಿಸಿ 4 ಚಿನ್ನ, 3 ಬೆಳ್ಳಿ ಪದಕಗಳನ್ನು ಪಡೆದಿರುತ್ತಾರೆ.

ಕ್ರೀಡೆಯೇ ಹಾಗೆ ಯಾರನ್ನು ಯಾವಾಗ ಯಾವ ಸ್ಥಿತಿಯಲ್ಲಿ ಮೋಹಿಸುತ್ತದೆ ಎಂದು ತಿಳಿದಿರುವುದಿಲ್ಲ.

ಕಾಲಿಲ್ಲದ ದೇಹ ದೇವಾಲಯವಾಗಿದ್ದೆ ಪವಾಡ, ಕಾಲು ಕಿತ್ತ ದೇವರು ದೇಹವನ್ನು ಸದೃಢವಾದ ಆಲಯದಂತೆ ನಿರ್ಮಿಸಿ ಕೈ ಬಿಡದೆ ಕೈಹಿಡಿದ ಆದರೆ ಕಾಸು ಕೊಡಬೇಕಲ್ಲ? ದೇಹದಾಢ್ಯತೆಗೆ ಬೇಕಾದ ಪೋಷಣೆ ತುಸು ಹೆಚ್ಚು, ಹಾಗಾಗಿ ಈ ಕ್ಷೇತ್ರದಿಂದ ದೂರ ಉಳಿಯಬೇಕಾದ ಸ್ಥಿತಿಯಲ್ಲಿ ಇವರನ್ನು ಕೈಬೀಸಿ ಕರೆದದ್ದೆ ಅಥ್ಲೆಟಿಕ್ಸ್.

2013ರಲ್ಲಿ ನೌಕರ ಕ್ರೀಡಾಕೂಟಕ್ಕೆ ತಡವಾಗಿ ಹೋದ ರಘು ರವರಿಗೆ ವಿಕಲಾಂಗ ಚೇತನರಿಗೂ ಕ್ರೀಡಾಕೂಟಗಳು ನಡೆಯುತ್ತವೆ ಎಂಬುದರ ಬಗ್ಗೆ ತಿಳಿದಿದ್ದೆ ಅಂದು ಅದಕ್ಕೆಲ್ಲ ಮುಖ್ಯ ಕಾರಣ ಕೃಷ್ಣೋಜಿ ಮತ್ತು ಗಿರೀಶ್, ಆರ್.

ಎಸ್–55 ಕೆಟಗರಿಯಲ್ಲಿ ಗುಂಡು ಮತ್ತು ತಟ್ಟೆ ಎಸತಕ್ಕೆ ಅವಕಾಶ ಪಡೆದ ಇವರಿಗೆ ಯಾವುದೇ ಎಸೆತದ ಜ್ಞಾನ ಇರಲಿಲ್ಲ. ಸ್ಟ್ಯಾಂಡ್ ನಲ್ಲಿ ಕುಳಿತು ಆ ಸಂಜೆ ಇದೇ ಕ್ರೀಡೆಯಲ್ಲಿ ಭಾಗವಹಿಸುವರು ನೋಡಿ ತಿಳಿದು ಭಾಗವಹಿಸಿ ಪದಕಗಳನ್ನು ಗಳಿಸುತ್ತಾರೆ.

ಇವರ ಜೊತೆಯಲ್ಲಿಯೇ ಬಾಡಿ ಬಿಲ್ಡಿಂಗ್ ಮಾಡಿಕೊಂಡು ಅಥ್ಲೆಟಿಕ್ಸ್ ನಲ್ಲಿ ಈಗಾಗಲೇ ಭಾಗವಹಿಸುತ್ತಿದ್ದವರು ಮಾಹಿತಿ ಕೊಡುವುದನ್ನು ಮರೆಮಾಚಿರುತ್ತಾರೆ ಮುಂದೆ ಇವರೆಲ್ಲರನ್ನು ಹಿಂದಿಕ್ಕಿದ್ದು ಇತಿಹಾಸ.

ಮಣಿಪುರದ ದದಾನ್ ಸಿಂಗ್ ಬೆಂಗಳೂರು ನಿವಾಸಿ ಇವರಿಂದ ಪೆನ್ಸಿಂಗ್ ಕ್ರೀಡೆಯಲ್ಲಿ ತರಬೇತಿ ಪಡೆಯಲು ಆರಂಭಿಸಿ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗಳಿಸುತ್ತಾರೆ. ಮುಂದೆ ಲಾನ್ ಬಾಲ್ ಕ್ರೀಡೆಯಲ್ಲಿ ಆಸಕ್ತಿ ವಹಿಸಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪದಕ ಗಳಿಸಿದ ಪ್ರಥಮ ಭಾರತೀಯ, ತರಬೇತಿಗೆ ಬೇಕಾದ ವ್ಯವಸ್ಥೆ ಇಲ್ಲದ ನಮ್ಮ ಕರ್ನಾಟಕದ ಪ್ರತಿಭೆ ಈ ಮಟ್ಟದ ಸಾಧನೆ ಮಾಡಿರುವುದು ಶ್ಲಾಘನೀಯ.

ಸೋನ್ಪಿ ಥಾಯ್ಲೆಂಡಿನ ತರಬೇತುದಾರರ ಕಣ್ಣಿಗೆ ಬಿದ್ದ ಇವರು ಆರ್ಥಿಕ ಸಂಕಷ್ಟದ ನಡುವೆಯೂ ಒಂದಷ್ಟು ದಿನಗಳ ಕಾಲ ತರಬೇತಿಯನ್ನು ಪಡೆಯುತ್ತಾರೆ.

ಸೋನ್ಪಿ ಶಿಷ್ಯರನ್ನೇ ಸೋಲಿಸಲಾರಂಭಿಸಿದ ರಘು ವಿರುದ್ಧ ಅಸೋಸಿಯೇಷನ್ಗೆ ದೂರು ನೀಡುತ್ತಾರೆ ಇದರ ಪರಿಣಾಮ ತರಬೇತಿಯನ್ನು ನಿಲ್ಲಿಸುತ್ತಾರೆ.

ಬಹುಮುಖ ಕ್ರೀಡಾ ಸಾಧನೆಗಳು

ಲಾನ್ ಬಾಲ್:– 2022 ಮಲೇಶಿಯಾದಲ್ಲಿ ನಡೆದ 3ನೇ ಏಷಿಯನ್ ಲಾನ್ ಬಾಲ್ ಚಾಂಪಿಯನ್ಶಿಪ್ ಫಾರ್ ಡಿಜೇಬಲ್ಡ್ ಡಬಲ್ಸ್ ವಿಭಾಗದಲ್ಲಿ ಬೆಳ್ಳಿ.

2022 ಮಹಾರಾಷ್ಟ್ರ 3ನೇ ರಾಷ್ಟ್ರೀಯ ಪ್ಯಾರ ಲಾನ್ ಬಾಲ್ ಚಾಂಪಿಯನ್ಶಿಪ್ ಡಬಲ್ಸ್ ಮತ್ತು ಟ್ರಿಯೂಸ್ ನಲ್ಲಿ ಒಂದೊಂದು ಬೆಳ್ಳಿ.

2023 ಮಹಾರಾಷ್ಟ್ರ 4ನೇ ರಾಷ್ಟ್ರೀಯ ಪ್ಯಾರ ಲಾನ್ ಬಾಲ್ ಚಾಂಪಿಯನ್ಶಿಪ್ ಸಿಂಗಲ್ಸ್ ಮತ್ತು ಟ್ರಿಯೂಸ್ ನಲ್ಲಿ ತಲಾ ಒಂದೊಂದು ಚಿನ್ನದ ಪದಕ.

ಕತ್ತಿ ವರಸೆ: 2022(ಲಂಡನ್) ಕಾಮನ್ವೆಲ್ತ್ ಫೆನ್ಸಿಂಗ್ ಚಾಂಪಿಯನ್ಶಿಪ್ ಚಾಂಪಿಯನ್ಶಿಪ್ ಇಪ್ಪಿ ಬೆಳ್ಳಿ, 2013 ಬೆಂಗಳೂರು ಕರ್ನಾಟಕ ವೀಲ್ ಚೇರ್ ಫೆನ್ಸಿಂಗ್ ಅಸೋಸಿಯೇಷನ್ ನಡೆಸಿದ ಕ್ರೀಡಾಕೂಟದಲ್ಲಿ ಸೇಬರ್ ಚಿನ್ನದ ಪದಕ, ಇಪ್ಪಿ ಕಂಚಿನ ಪದಕ. 2019 ತಮಿಳುನಾಡು 12ನೇ ವೀಲ್ ಚೇರ್ ಪೆನ್ಸಿಂಗ್ ನ್ಯಾಷನಲ್ ಚಾಂಪಿಯನ್ಶಿಪ್ ಸೇಬರ್ ಕಂಚು ಇಪ್ಪಿ ಕಂಚು, 2021 ಹರಿಯಾಣ 13ನೇ ನ್ಯಾಷನಲ್ ವೀಲ್ ಚೇರ್ ಪೆನ್ಸಿಂಗ್ ಚಾಂಪಿಯನ್ಶಿಪ್ ಪಾಯಿಲ್, ಸೇಬರ್ , ಇಪ್ಪಿ ತಲಾ ಒಂದೊಂದು ಕಂಚು ಮತ್ತು 2022 14ನೇ ನ್ಯಾಷನಲ್ ವೀಲ್ ಚೇರ್ ಪೆನ್ಸಿಂಗ್ ಚಾಂಪಿಯನ್ಶಿಪ್ ಇಪ್ಪಿ, ಪಾಯಲ್, ಸೇಬರ್ ಮೂರು ಮಾದರಿಯಲ್ಲೂ ತಲಾ ಒಂದೊಂದು ಕಂಚು.

ಜಾವಲಿನ್ ಎಸೆತ: 2014(ಶಾರ್ಜಾ)4ನೇ ಶಾರ್ಜಾ ಇಂಟರ್ನ್ಯಾಷನಲ್ ಓಪನ್ ಅಥ್ಲೆಟಿಕ್ಸ್ ಕಾಂಪಿಟೇಶನ್ ಚಿನ್ನದ ಪದಕ, ಫಾಜಾ(ದುಬೈ) ಇಂಟರ್ನ್ಯಾಷನಲ್ ಅಥ್ಲೆಟಿಕ್ಸ್ ಗ್ರಾಂಡ್ ಫಿಕ್ಸ್ ಕಂಚು, ಕೊರಿಯಾದಲ್ಲಿ ನಡೆದ ಪ್ಯಾರಾ ಏಷ್ಯನ್ ಗೇಮ್ಸ್ ನಲ್ಲಿ ಭಾಗವಹಿಸುವಿಕೆ.

2015 ರಷ್ಯಾದಲ್ಲಿ ನಡೆದ ವಿಶ್ವ ಗೇಮ್ಸ್ ನಲ್ಲಿ ಭಾಗವಹಿಸುವಿಕೆ, ಗಜಿಯಾಬಾದ್ 15ನೇ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಮತ್ತು 2016 ಹರಿಯಾಣದಲ್ಲಿ ನಡೆದ 16 ನೇ ರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಕಂಚು ಇದಲ್ಲದೆ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ 1ಚಿನ್ನದ ಪದಕವನ್ನು ಗಳಿಸಿರುತ್ತಾರೆ.

ಡಿಸ್ಕಸ್ ಥ್ರೋ: 2018 ಬೆಂಗಳೂರಿನಲ್ಲಿ ನಡೆದ ಇಂಡಿಯನ್ ಪ್ಯಾರಾ ಇಂಟರ್ನ್ಯಾಷನಲ್ ಅಥ್ಲೆಟಿಕ್ ಚಾಂಪಿಯನ್ಶಿಪ್ ನಲ್ಲಿ ಚಿನ್ನ,ವರ್ಲ್ಡ್ ಪ್ಯಾರಾ ಅಥ್ಲೆಟಿಕ್ಸ್ ಗ್ರಾಂಡ್ ಫಿಕ್ಸ್(ಬರ್ಲಿನ್) ಬೆಳ್ಳಿ,ಇಂಡೋನೇಷ್ಯಾ ಇಲ್ಲಿ ನಡೆದ ಪ್ಯಾರಾ ಏಷಿಯನ್ ಗೇಮ್ಸ್ ನಲ್ಲಿ ಭಾಗವಹಿಸುವಿಕೆ,

2016 ಮತ್ತು 2018 ಹರಿಯಾಣದಲ್ಲಿ ನಡೆದ 16 ಮತ್ತು 18ನೇ ರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಚಿನ್ನ ಮತ್ತು ಬೆಳ್ಳಿ, 2017 (ರಾಜಸ್ಥಾನ)17 ನೇ ರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಕೂಟ ಬೆಳ್ಳಿ,2019 ಮತ್ತು 2021 (ಬೆಂಗಳೂರು)ಇಂಡಿಯನ್ ಓಪನ್ ನ್ಯಾಷನಲ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್ ನಲ್ಲಿ ಬೆಳ್ಳಿ ಮತ್ತು ಕಂಚು ಹಾಗೂ ರಾಜ್ಯಮಟ್ಟದಲ್ಲಿ ಮೂರು ಚಿನ್ನದ ಪದಕಗಳನ್ನು ಪಡೆದಿರುತ್ತಾರೆ.

ಗುಂಡು ಎಸೆತ: 2018(ಬೆಂಗಳೂರು) ಇಂಡಿಯನ್ ಪ್ಯಾರಾ ಇಂಟರ್ನ್ಯಾಷನಲ್ ಅಥ್ಲೆಟಿಕ್ ಚಾಂಪಿಯನ್ಶಿಪ್ ಕಂಚು, 2013

ಪ್ಯಾರಾಲಂಪಿಕ್ ಸೀನಿಯರ್ ನ್ಯಾಷನಲ್ ಅಥ್ಲೆಟಿಕ್ ಚಾಂಪಿಯನ್ಶಿಪ್ ಬೆಳ್ಳಿ, 2019 ಇಂಡಿಯನ್ ಓಪನ್ ನ್ಯಾಷನಲ್ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ಶಿಪ್ ಕಂಚು, 2015 ಗಜಿಯಾಬಾದ್ 15ನೇ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ಶಿಪ್ ಬೆಳ್ಳಿ, 2018 ಹರಿಯಾಣ 18ನೇ ರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಕೂಟ ಬೆಳ್ಳಿ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ 2 ಚಿನ್ನದ ಪದಕಗಳನ್ನು ಪಡೆದಿರುತ್ತಾರೆ.

ಶಂಕರ್ ಅಯ್ಯರ್ ರವರ ನೇತೃತ್ವದಲ್ಲಿ ಶಾರ್ಜಾದಲ್ಲಿ ಪಡೆದ ಚಿನ್ನದ ಪದಕ ಸ್ಮರಣೀಯ ಕಾರಣ ಭಾರತದಿಂದ ಪ್ರತಿನಿಧಿಸಿದವರಾರು 3ದಿನಗಳ ಕ್ರೀಡಾಕೂಟದಲ್ಲಿ 2ದಿನ ವಾದರೂ ಪದಕ ಗಳಿಸಿರಲಿಲ್ಲ 3ನೇ ದಿನ ಚಿನ್ನದ ಪದಕ ಗಳಿಸಿದ್ದು ನನ್ನ ಜೀವನದ ಶ್ರೇಷ್ಠ ಸಾಧನೆ ನನ್ನ ದೇಶದ ಧ್ವಜವನ್ನು ಹಿಡಿದು ರಾಷ್ಟ್ರಗೀತೆ ಮೊಳಗಿದ ಕ್ಷಣ ನೆನೆದರೆ

ಕವಿ ಮನಸು

ಬಿಂಬ

ನಿನ್ನ ನೆನಪಿನಲ್ಲಿ ದಿನದ ಆರಂಭ
ಮತ್ತೆ ಮತ್ತೆ ಕಾಡುತ್ತಿದೆ ನಿನ್ನ ಪ್ರತಿಬಿಂಬ
ನಿನ್ನ ಸ್ವಾಗತಿಸಲೆಂದು ಅರಳಿ ನಿಂತಿದೆ
ಕದಂಬ
ಸುಗಂಧೆಯ ಹರಡಿ ಮನದ ತುಂಬ.

ನಿನ್ನ ಕಾಣಲು ಕಾದು ಕುಳಿತಿರುವೆ
ಶಬರಿಯಂತೆ
ನಿನ್ನ ಗುಣಗಾನ ಮಾಡುತ್ತಾ ಮೈ ಮರೆತೆ
ಮೀರಾಳಂತೆ
ನಿನ್ನ ಬಿಟ್ಟು ಬೇರೆಯಾರಿಗೂ ನನ್ನಲ್ಲಿ
ಸ್ಥಳವಿಲ್ಲ
ನಿನ್ನ ಪ್ರೀತಿಗಾಗಿ ಜಗದ ಮುಂದೆ
ಸೋಲಲು ಬಿಡಬೇಡ.

ಮೊಗ್ಗಿನ ಒಳಗಿನ ಸುಗಂಧದಂತೆ,
ಚಿಪ್ಪಿನ ಒಳಗಿನ ಮುತ್ತಿನಂತೆ,
ಕಣ್ಣಿನ ರೆಪ್ಪೆಯಲ್ಲಿ ಕಾಪಿಡುವೆ ಪ್ರೀತಿಯ
ಆ ನಿನ್ನ ಮೊಗವ ಅಳಿಸಲಾಗದ
ಬಿಂಬದಂತೆ.

– ಮಂಜುಶ್ರೀ ಮುರಳೀಧರ್

ದಾರಿದೀಪ

ನನ್ನ ಬಾಳಿನ ದಾರಿದೀಪವು
ಅಕ್ಷರವ ಕಲಿಸಿದ ಗುರುವು
ತಪ್ಪಿದಾಗ ಕ್ಷಮೆ ನೀಡಿದರು
ಸರಳತೆಯ ಬೋಧಿಸಿದರು

ಸತ್ಯ ನೀತಿಕಥೆಯ ಹೇಳಿದರು
ಒಗ್ಗಟ್ಟಲಿ ಬಲವಿದೆ ಎಂದರು
ಮಹಾತ್ಮರ ಆದರ್ಶವ ತಿಳಿಸಿದರು
ಹೆತ್ತವರ ಗೌರವಿಸಬೇಕೆಂದರು

ಸಮಾಜಕೆ ಒಳಿತು ಮಾಡೆಂದರು
ಹಿರಿಯರಿಗೆ ನೆರವಾಗಬೇಕೆಂದರು
ಆರೋಗ್ಯವಂತರಾಗಿರಬೇಕೆಂದರು
ಮಾತಲಿ ಹಿಡಿತವ ಇರಬೇಕೆಂದರು

ಇಂದಿಗೂ ನೀವು ಸ್ಮರಣೀಯರು
ರಾಜ್ಯ ಪ್ರಶಸ್ತಿಯ ಪುರಸ್ಕೃತರು
ನಮ್ಮ ಭವಿಷ್ಯದ ಕಾರಣೀಭೂತರು
ನಿಮ್ಮಿಂದ ಕಲಿತವರು ಭಾಗ್ಯವಂತರು

– ರವೀಂದ್ರ ಎಸ್ ಸಿಂಪಿ ಶಿಕ್ಷಕರು

ಏ.16 ರಂದು ಜಿಲ್ಲಾ ಮಟ್ಟದ 'ಸ್ವೀಕಥಾನ್' ಸ್ಪರ್ಧೆ; ಸಾರ್ವಜನಿಕರಿಗೆ ವೀಕ್ಷಿಸಲು ಅವಕಾಶ

ಹಂಪಿ ಟೈಮ್ಸ್ ಬಳ್ಳಾರಿ

ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಇವರ ವತಿಯಿಂದ ಸಾರ್ವಜನಿಕರಲ್ಲಿ ನೈತಿಕ ಮತದಾನ ಕುರಿತು ಜಾಗೃತಿ ಮತ್ತು ಶೇಕಡವಾರು ಮತದಾನ ಪ್ರಮಾಣ ಹೆಚ್ಚಳ ಮಾಡಲು ಸ್ವೀಪ್ ಚಟುವಟಿಕೆ ಅಂಗವಾಗಿ ಏ.16 ರಂದು ಮಧ್ಯಾಹ್ನ 03 ಗಂಟೆಗೆ ಜಿಲ್ಲಾ ಪಂಚಾಯತ್ ನನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ 'ಸ್ವೀಕಥಾನ್' ಸ್ಪರ್ಧೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿ ಆಗಿರುವ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

ಈಗಾಗಲೇ ತಾಲ್ಲೂಕು ಮಟ್ಟದಲ್ಲಿ 30 ವರ್ಷಕ್ಕಿಂತ ಕಡಿಮೆ ಮತ್ತು ಮೇಲ್ಪಟ್ಟ ವಯೋಮಿತಿಯವರಿಗೆ ಚುನಾವಣಾ ವಿಷಯ ಕುರಿತಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಾಲ್ಲೂಕು ಮಟ್ಟದ 'ಸ್ವೀಕಥಾನ್' ಸ್ಪರ್ಧೆ ನಡೆದಿದ್ದು, ತಾಲ್ಲೂಕು ಮಟ್ಟದಲ್ಲಿ ವಿಜೇತರಾದವರಿಗೆ ಏ.16 ರಂದು ಜಿಲ್ಲಾ ಮಟ್ಟದಲ್ಲಿ ನಡೆಯಲಿದೆ. ಆಸಕ್ತ ಸಾರ್ವಜನಿಕರು ಮುಕ್ತವಾಗಿ ಆಗಮಿಸಿ ಸ್ಪರ್ಧೆಯನ್ನು ವೀಕ್ಷಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಕಣ್ಮನ ಸೆಳೆಯುವ ಅದ್ಭುತ ಸೌಂದರ್ಯದ ದುಬೈನ ಮಿರಾಕಲ್ ಗಾರ್ಡನ್

ಅದು ನಮ್ಮ ಕಡೆ ಕಾಣ ಸಿಗುವ ಮಧ್ಯಾಹ್ನ ಮಲ್ಲಿಗೆ ಇಲ್ಲವೇ ತ್ರಿಕಾಲ ಮಲ್ಲಿಗೆ ಎಂದು ಕರೆಯಲ್ಪಡುವ ಒಂದು ಜಾತಿಯ ಪೊದೆಯಂತಹ ಹೂವಿನ ಗಿಡ. ಆ ಹೂವಿನಲ್ಲಿ ಹಲವಾರು ಬಣ್ಣಗಳನ್ನು ಹೊಂದಿರುವ ವರ್ಷದ 12 ತಿಂಗಳು ಹೂ ಬಿಡುವ ಈ ಗಿಡ ಅಲ್ಲಲ್ಲ ಪೊದೆಗೆ ಎಲ್ಲೆಂದರಲ್ಲಿ ಹಬ್ಬಿ ಹರಡುವ ಸಾಮರ್ಥ್ಯವಿದೆ. ಬಹುಶಹ ಅತ್ಯಂತ ಕಡಿಮೆ ನಿರ್ವಹಣೆಯನ್ನು ಬಯಸುವ ಈ ಒಂದು ಪೊದೆಯಿಂದಲೇ ಒಂದು ಸುಂದರವಾದ ಅದ್ಭುತ ಮಿರಾಕಲ್ ಗಾರ್ಡನ್ ನ ಸೃಷ್ಟಿ ಮರುಭೂಮಿ ನಾಡು ದುಬೈನಲ್ಲಿ ಆಗಿದೆ. ಈ ಹೂಗಳನ್ನು ಬಿಟ್ಟರೆ ಇಲ್ಲಿ ಇರುವ ಬೇರೆ ಹೂಗಳೆಂದರೆ ಗುಲಾಬಿ,ಟುಲಿಪ್, ಮೆರಿಗೋಲ್ಡ್ ಮುಂತಾದವು. ಸುಮಾರು 72,000 ಚದರ ಮೀಟರ್ ವಿಸ್ತೀರ್ಣದ ಮಿರಾಕಲ್ ಗಾರ್ಡನ್ ನಲ್ಲಿ 25 ಮಿಲಿಯನ್ ಗಿಡಗಳಿದ್ದು 50 ಮಿಲಿಯನ್ಗಿಂತಲೂ ಹೆಚ್ಚು ಹೂಗಳನ್ನು ಹೊಂದಿರುವ ವಿಶ್ವದ ಅತಿ ದೊಡ್ಡ ಹೂಗಳ ತೋಟ ಈ ಮಿರಾಕಲ್ ಗಾರ್ಡನ್. 2013 ಫೆಬ್ರವರಿ 14ರಂದು ವ್ಯಾಲೆಂಟೈನ್ಸ್ ಡೇ ದಿನ ಈ ಮಿರಾಕಲ್ ಗಾರ್ಡನ್ ಉದ್ಘಾಟನೆಯಾಯಿತು. ತಂಪಾದ ವಾತಾವರಣದಲ್ಲಿ ಸುಮಾರು 50 ಮಿಲಿಯಕ್ಕಿಂತಲೂ ಹೆಚ್ಚು ಹೂಗಳು ಅರಳುವ ಭೂಲೋಕದ ಸ್ವರ್ಗ ಎಂದು ಈ ಹೂಗಳ ತೋಟವನ್ನು ಕರೆಯಬಹುದು.

ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬಂಡೆಯನ್ನು ಗುದ್ದಿ ನೀರನ್ನು ತೆಗೆಯಬಹುದು ಎಂಬ ಮಾತನ್ನು ಹಲವಾರು ಬಾರಿ ಕೇಳಿದ್ದೆವು, ಆದರೆ ನೀರೇ ಇಲ್ಲದ ಮರುಭೂಮಿಯಲ್ಲಿ ವರ್ಷದ 12 ತಿಂಗಳು ಹಸಿರಾಗಿರುವಂತಹ ಈ ಮಿರಾಕಲ್ ಗಾರ್ಡನ್ ದುಬೈ ಜನರ ಅಪಾರ ಜೀವನೋತ್ಸಾಹ ಮತ್ತು ಅಸೀಮ ಶ್ರದ್ಧೆಗೆ ಕಾರಣವಾಗಿದೆ ಎಂದರೆ ತಪ್ಪಲ್ಲ.

ಮಿರಾಕಲ್ ಗಾರ್ಡನ್ ನ ಒಳಗೆ ಪ್ರವೇಶಿಸುತ್ತಲೇ ನಮಗೆ ದೊಡ್ಡ ದೊಡ್ಡ ಕಮಾನುಗಳಿಗೆ ಸುತ್ತಿಕೊಂಡಿರುವ ಬಣ್ಣದ ಹೂಗಳ ನೋಟ ಕಾಣ ಸಿಗುತ್ತದೆ. ಸುತ್ತ ಹಚ್ಚ ಹಸುರಿನ ಕೃತಕವಾಗಿ ಬೆಳೆಸಲ್ಪಟ್ಟ ವನಸಿರಿಯನ್ನು ಹೊಂದಿರುವ ಮಿರಾಕಲ್ ಗಾರ್ಡನ್ ಒಳ ಹೋಗುತ್ತಲೆ ಮನಸ್ಸು ಹೂವಿನಷ್ಟೇ ಹಗುರಾಗಿ ದೇಹಕ್ಕೆ ತಂಪಿನ ಅನುಭವವಾಗುತ್ತದೆ. ಕಣ್ಣು ಹಾಯಿಸಿದಷ್ಟು ದೂರ ದೂರಕ್ಕೆ ಹಸಿರು ವನಸಿರಿ ಮತ್ತು ಬಣ್ಣ ಬಣ್ಣದ ಹೂಗಳು ಕಣ್ಮನ ಸೆಳೆದು ಮೈ ಮನದ ದಣಿವನ್ನು ನೀಗಿಸುತ್ತವೆ.

ಕಮಾನುಗಳ ಮೂಲಕ ಒಳ ಪ್ರವೇಶಿಸಿದ ಕೂಡಲೇ ಎದುರಿಗೆ ಮರುಭೂಮಿಯ ವಾಹನ ಒಂಟೆಯ ಆಕೃತಿಯಲ್ಲಿ ಬೆಳೆಸಿರುವ ಎರಡು ಬೃಹತ್ ಗಿಡಗಳನ್ನು ನೋಡಬಹುದು. ಸುಮಾರು ನಾಲ್ಕಾಳೆತ್ತರದ ಈ ಒಂಟೆಗಳ ಆಕೃತಿ ಆಕರ್ಷಣೀಯವಾಗಿದೆ.

ಹಲವಾರು ಕವಲುಗಳಲ್ಲಿ ಉದ್ಯಾನವನ್ನು ಸುತ್ತಿ ಬರಲು ಅವಕಾಶವಿದ್ದು ನಾವು ಬಲ ಪಾರ್ಶ್ವದಿಂದ ಉದ್ಯಾನದ ಒಳಹೊಕ್ಕೆವು. ಕೃತಕವಾಗಿ ನಿರ್ಮಿಸಿದ ಪುಟ್ಟ ಸರೋವರ ಅದಕ್ಕೆ ಅಳವಡಿಸಿರುವ ಏತ ನೀರಾವರಿ ವ್ಯವಸ್ಥೆ ಅಲ್ಲಲ್ಲಿ ಕುಳಿತು ದಣಿವಾರಿಸಿಕೊಳ್ಳಲು ಕುರ್ಚಿಗಳ ವ್ಯವಸ್ಥೆ ಬಿಸಿಲಿನ ಬೇಗೆಯಿಂದ ರಕ್ಷಿಸಿಕೊಳ್ಳಲು ಛತ್ರಿಗಳ ದೊಡ್ಡ ಹಾಸನ್ನೇ ಚಪ್ಪರದಂತೆ ಹಾಸಿದ್ದು ಬಿಸಿಲು ಸೋಂಕದಂತಹ ಅದ್ಭುತ ನೆರಳಿನ ವ್ಯವಸ್ಥೆ ಅಲ್ಲಿದೆ. ಮುಂದೆ ಸಾಗುತ್ತಾ ಹೋದರೆ ಅಲ್ಲೊಂದು ವಿಮಾನ. ಬಹುಶಹ ಕಸದಿಂದಲೂ ರಸ ತೆಗೆಯುವ ಕಲೆ ದುಬೈ ಜನರಿಗೆ ದಕ್ಕಿದೆ. ಇಡೀ ವಿಮಾನವನ್ನು ಬಣ್ಣ ಬಣ್ಣದ ಹೂಗಳಿಂದ ಹಸಿರು ಎಲೆಗಳಿಂದ ಆವೃತಗೊಳ್ಳುವಂತೆ ಬೆಳೆಸಿರುವ ವಿಮಾನದ ಪ್ರತಿಯೊಂದು ಭಾಗವು ಅತ್ಯಂತ ಆಕರ್ಷಣೀಯವಾಗಿ ಕಾಣುವಂತೆ ಮಾರ್ಪಡಿಸಲಾಗಿದೆ. ಮುಂದೆ ಸಾಗುತ್ತಿದ್ದಂತೆ ದೊಡ್ಡ ದೊಡ್ಡ ಗಾತ್ರದ ಸ್ಮರ್ಫ್ ಕಾರ್ಟೂನ್ಗಳನ್ನು ಅಲ್ಲಲ್ಲಿ ಅಳವಡಿಸಲಾಗಿದ್ದು ಅವುಗಳ ಮುಂದೆ ಆ ಕಾರ್ಟೂನ್ ಗಳು ನಿಂತಿರುವ ಭಂಗಿಯಲ್ಲಿಯೇ ಫೋಟೋ ತೆಗೆದುಕೊಳ್ಳುವ ನೂರಾರು ಜನರ ಗುಂಪು ಅಲ್ಲಿತ್ತು. ನಾವು ಕೂಡ ಅಲ್ಲಲ್ಲಿ ನಿಂತು ಫೋಟೋಗಳನ್ನು ತೆಗೆಸಿಕೊಂಡು ಮುಂದೆ ಸಾಗಿದಾಗ ಅಲ್ಲಿ ಬೃಹದಾಕಾರದ ಗಿಡಗಳನ್ನು ಪೆಂಗ್ವಿನ್ ಮಾದರಿಯಲ್ಲಿ ಕತ್ತರಿಸಿ ಬೆಳೆಸಲಾಗಿತ್ತು. ಮುಂದೆ ಸಾಗಿದಾಗ ಅಲ್ಲಿ ನಮ್ಮ ಸೂರ್ಯಕಾಂತಿಯನ್ನು ಹೋಲುವ ಕೆಲ ಹೂಗಳನ್ನು ಬೆಳಸಲಾಗಿತ್ತು. ಮೊದಲ ಬಾರಿಗೆ ಬೇರೊಂದು ರೀತಿಯ ಪುಷ್ಪವನ್ನು ಕಂಡಾಗ ಕಣ್ಣರಳಿತ್ತು. ಹಾಗೆಯೇ ಮುಂದೆ ಸಾಗಿದಾಗ ಅಲ್ಲೊಂದು ಬೃಹದಾಕಾರದ ಮರ ಆ ಮರದಲ್ಲಿ ದೊಡ್ಡ ರಾಕ್ಷಸನಂತಹ ಮುದ್ದಾದ ಆಕೃತಿ ಮತ್ತು ಅದರ ಮಕ್ಕಳ ಆಕೃತಿಗಳು. ಇದನ್ನು ನೋಡಿದಾಗ ನನಗೆ ನಾವು ಚಿಕ್ಕಂದಿನಲ್ಲಿ ಕೇಳುತ್ತಿದ್ದ ಹುಣಸೆ ಮರದಲ್ಲಿ ವಾಸವಾಗಿರುತ್ತಿದ್ದ ಏಳು ಮಕ್ಕಳ ತಾಯಿ ನೆನಪಾದಳು.

ಮತ್ತೆ ಮುಂದೆ ತಿರುವಿನಲ್ಲಿ ಸಾಗಿದಾಗ ಅಲ್ಲಲ್ಲಿ ಇಗ್ಲೂ ಗಳಂತಹ ರಚನೆಗಳು ಮತ್ತು ಅವುಗಳ ಮೇಲೂ ಕೂಡ ಹಬ್ಬಿದ ಹೂಗಳ ಪೊದೆಗಳು ಕಾಣಸಿಕ್ಕವು. ನಂತರ ಅಲ್ಲೊಂದು ಬೃಹದಾಕಾರದ ಮನೆ. ಬೆಂಗಳೂರಿನ ಟಿಪ್ಪು ಪ್ಯಾಲೇಸ್ ನಂತೆ ತೋರುವ ಆ ಬೃಹತ್ ಭವನಕ್ಕೆ ಹೂವಿನ ಬಳ್ಳಿಗಳ ಶೃಂಗಾರ! ಅಬ್ಬಾ ವರ್ಣಿಸಲಸದಳ. ಇಳಿ ಮಧ್ಯಾಹ್ನದ ಆ ಹೊತ್ತಿನಲ್ಲಿ ಆ ಬೃಹತ್ ಭವನದ ಹಿನ್ನೆಲೆಯಲ್ಲಿ ಹೂಗಳ ಸೌಂದರ್ಯ ಕಣ್ಮನ ಸೆಳೆಯುವಂತಿತ್ತು. ಅತ್ಯಾಕರ್ಷಕವಾದ ಹಸಿರು ಮತ್ತು ಹೂಗಳ ವರ್ಣ ಸಂಯೋಜನೆ ಅದ್ಭುತ. ಅಲ್ಲಿಯೇ ಪಕ್ಕದಲ್ಲಿ ಹೂಗಳಿಂದಲೇ ನಿರ್ಮಿಸಿದ ಬೃಹತ್ ಗಡಿಯಾರ ಇದೆ. ಸಾಗಿದಷ್ಟು ದೂರದವರೆಗೂ ಕಣ್ಣಂಚಿನ ಕೊನೆಯ ನೋಟದವರೆಗೂ ಉದ್ಯಾನವನ್ನು ವೀಕ್ಷಿಸುತ್ತಾ ಕಾಲುಗಳು ದಣಿದಿದ್ದರೂ, ಮನಸ್ಸು ಅನಿರ್ವಚನೀಯ ಆನಂದವನ್ನು ಅನುಭವಿಸುತ್ತಿತ್ತು. ಮತ್ತೆ ಹಲವಾರು ಭವನಗಳು ತುಸು ಎತ್ತರದ ಪ್ರದೇಶದ ಮೇಲೆ ಹೂಗಳ ಅಲಂಕಾರದಿಂದ ನಿರ್ಮಿಸಲ್ಪಟ್ಟಿದ್ದು ಅವುಗಳನ್ನು ತಲುಪುವ ದಾರಿಯಲ್ಲಿ ಹಸಿರಿನಿಂದ ಕೂಡಿದ ಮೆಟ್ಟಿಲುಗಳು ಬಣ್ಣ ಬಣ್ಣದ ಹೂಗಳ ಬಳ್ಳಿಗಳನ್ನು ಹಬ್ಬಿಸಿರುವ ಕಮಾನುಗಳು ದೊಡ್ಡ ದೊಡ್ಡ ದೀಪದ ಕಂಬಗಳು ಅವುಗಳಿಗೂ ಕೂಡ ತೂಗು ಬಿಟ್ಟಿರುವ ದೊಡ್ಡ ದೊಡ್ಡ ಹೂವಿನ ಕುಂಡಗಳು ಒಂದೇ ಎರಡೇ!! ಆ ನೋಟ ಮನಸ್ಸಿಗೆ ಮುದ ನೀಡುವುದರಲ್ಲಿ ಆಶ್ಚರ್ಯವೇ ಇಲ್ಲ. ಅಲ್ಲಿಯೇ ಒಂದೆಡೆ ಬೃಹದಾಕಾರದ ಟೆಡ್ಡಿ ಬೇರ್ ಗಳ ಆಕಾರದಲ್ಲಿ ಕತ್ತರಿಸಿದ ಗಿಡಗಳು ಅವುಗಳ ಕಣ್ಣಿನ ಜಾಗದಲ್ಲಿ ಪುಟ್ಟ ಕಪ್ಪು ಬಿಳಿ ಹೂಗಳ ಬೆಳೆಸುವಿಕೆ ಅದ್ಭುತ. ಅಲ್ಲಿಗೆ ಒಂದೆಡೆ ಬಿದಿರಿನ ಬೃಹದಾಕಾರದ ಕುಂಡಗಳು ಅವುಗಳ ಮೇಲೆ ಮತ್ತೆ ಬಣ್ಣ ಬಣ್ಣದ ಹೂಗಳು. ಸುತ್ತಿದಷ್ಟೂ ಮುಗಿಯದ, ನೋಡಿದಷ್ಟು ತಣಿಯದ ಹೂಗಳ ಸಾಮ್ರಾಜ್ಯ ಇಲ್ಲಿದೆ. ಸುಮಾರು ಎರಡು–ಮೂರು ಗಂಟೆಗಳ ಕಾಲ ಇಡೀ ಉದ್ಯಾನವನ ಸುತ್ತಿ ಅಲ್ಲಲ್ಲಿ ನಿಂತು ಫೋಟೋಗಳನ್ನು ತೆಗೆದುಕೊಂಡು ಕಣ್ಮನ ಸೆಳೆಯುವ ಅದ್ಭುತ ಸೌಂದರ್ಯವನ್ನು ಆಸ್ವಾದಿಸುತ್ತಾ ಅಂತಿಮವಾಗಿ ಮತ್ತೆ ಮುಂಭಾಗಕ್ಕೆ ಬಂದು ನಿಂತಾಗ ಸಣ್ಣದಾಗಿ ಹೊಟ್ಟೆ ಹಸಿದಿತ್ತು. ಅಲ್ಲಿಯೇ ಆನೆ ಆಕಾರದ ಗಿಡಗಳ ಕೆಳಗೆ ಕುಳಿತುಕೊಂಡು ನಮ್ಮದೊಂದು ಗ್ರೂಪ್ ಫೋಟೋ ತೆಗೆದುಕೊಂಡೆವು. ಅಲ್ಲಿಯೇ ಒಬ್ಬ ಐಸ್ ಕ್ರೀಂ ಮಾರುವವ ನಿಂದ ಐಸ್ ಕ್ರೀಮ್ ಕೊಂಡು ಅದನ್ನು ಸವಿಯುತ್ತಾ ಮತ್ತೊಮ್ಮೆ ಮಿರಾಕಲ್ ಗಾರ್ಡನ್ ನ ವಿಹಂಗಮ ದೃಶ್ಯಗಳನ್ನು ಆಸ್ವಾದಿಸಿದೆವು. ಉತ್ಸಾಹದಿಂದ –ನಡೆದು ಇಡೀ ಮಿರಾಕಲ್ ಗಾರ್ಡನ್ ಇಂಚಿಂಚು ಜಾಗವನ್ನು ನೋಡಿ ಕಣ್ತುಂಬಿಕೊಂಡ ನಮ್ಮ ಮನಸ್ಸು ತೃಪ್ತಿ ಮತ್ತು ಸಂತಸದ ಕಡಲಾಗಿತ್ತು. ಅಷ್ಟು ದೊಡ್ಡ ವಿಸ್ತೀರ್ಣದ ಹೂದೋಟದಲ್ಲಿ ಎಲ್ಲಿಯೂ ಉಸ್ತುವಾರಿ ಕೆಲಸದವರು ಕಾಣುತ್ತಿರಲಿಲ್ಲ. ಒಂದು ಚೂರು ಕಸವೂ ನೆಲದ ಮೇಲಿರಲಿಲ್ಲ. ಗಿಡದ ತರಗೆಲೆಗಳಾಗಲಿ ಉದುರಿದ ಹೂವಿನ ಕಸವಾಗಲಿ ಇಲ್ಲದೆ ಸ್ವಚ್ಛ ಸುಂದರವಾದ ತೋಟ ಅದಾಗಿದೆ.

ಮಾನವ ನಿರ್ಮಿತ ಈ ಪುಷ್ಪೋದ್ಯಾನ ದುಬೈನ ಮುಕುಟಮಣಿಯಂತೆ ಶೋಭಿಸುತ್ತದೆ ಎಂದು ಹೇಳಿದರೆ ತಪ್ಪಿಲ್ಲ. ಕರ್ತೃತ್ವ ಶಕ್ತಿಗೆ ಇನ್ನೊಂದು ಹೆಸರು ದುಬೈನ ಮಿರಾಕಲ್ ಗಾರ್ಡನ್. ಜೀವನದಲ್ಲಿ ಸಾಧ್ಯವಾದರೆ ಒಮ್ಮೆ ನೋಡಿ ಉದ್ಯಾನದ ಸೌಂದರ್ಯವನ್ನು ಸವಿಯಿರಿ.

ಸಂವಿಧಾನದ ಮಹತ್ವ ಪ್ರತಿಯೊಬ್ಬರು ಅರಿಯಬೇಕು

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಜಿಲ್ಲಾಡಳಿತದಿಂದ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ

ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಕಾರ್ಯಕ್ರಮವನ್ನು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಏಪ್ರೀಲ್ 14ರಂದು ಸರಳವಾಗಿ ಆಚರಿಸಲಾಯಿತು.

ಹೊಸಪೇಟೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಅವರ ವೃತ್ತದಲ್ಲಿನ ಡಾ.ಅಂಬೇಡ್ಕರ ಅವರ ಪುತ್ಥಳಿಗೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ ಸೇರಿದಂತೆ ಇನ್ನಿತರ ಅಧಿಕಾರಿಗಳು ಮತ್ತು ಸಮಾಜದ ಬಂಧುಗಳು ಪುಷ್ಪನಮನ ಸಲ್ಲಿಸಿ ಗೌರವಿಸಿದರು.

ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮಾತನಾಡಿ, ಸಂವಿಧಾನದ ಮಹತ್ವವನ್ನು ಪ್ರತಿಯೊಬ್ಬರು ಅರಿಯಬೇಕು. ಗ್ರಾಮಮಟ್ಟದ ಸದಸ್ಯರಿಂದ ಹಿಡಿದು ರಾಷ್ಟ್ರಪತಿ ಅವರವರೆಗೂ ಸಂವಿಧಾನವು ಬಳಕೆಯಾಗುತ್ತಿರುವುದು ಅದರ ಹಿರಿಮೆಯನ್ನು ತಿಳಿಸುತ್ತದೆ. ಬಳಕೆ ಮತ್ತು ಪ್ರಸ್ತುತತೆಯಿಂದಲೇ ಸಂವಿಧಾನವು ದೇಶದ ಹಿರಿಮೆ ಎಂದೆನಿಸಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನಕ್ಕೆ ನಾವೆಲ್ಲರೂ ಗೌರವಿಸಬೇಕಿದೆ ಎಂದು ತಿಳಿಸಿದರು.

ಮಹಾತ್ಮಗಾಂಧೀಜಿಯವರು ಪ್ರೀತಿ ಮತ್ತು ಶಾಂತಿಯ ಬಗ್ಗೆ ಹೇಳಿದರೆ, ಕಾರ್ಲಮಾರ್ಕ್ಸ ಅವರು ಆರ್ಥಿಕತೆಯ ಬಗ್ಗೆ ತಿಳಿಸುತ್ತಾರೆ. ಗೌತಮ ಬುದ್ಧ ಅವರು ಕೂಡ ಶಾಂತಿಯ ಬಗ್ಗೆ ಸಂದೇಶ ನೀಡುತ್ತಾರೆ. ಬುದ್ಧ, ಮಹಾತ್ಮಗಾಂಧಿ, ಕಾರ್ಲಮಾರ್ಕ್ಸ ಇವರೆಲ್ಲರ ಸಂದೇಶಗಳನ್ನು ಒಟ್ಟುಗೂಡಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಬರೆದರು. ಸಂವಿಧಾನವು ನಿರ್ದೇಶಿಸಿದಂತೆ ದೇಶವನ್ನು ಮತ್ತು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸೋಣ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಅವರು ಮಾತನಾಡಿ, ನಮ್ಮೆಲ್ಲರ ನಿತ್ಯ ಜೀವನದಲ್ಲಿ ಸಂವಿಧಾನವಿದೆ. ಪ್ರತಿಯೊಂದು ಸಂದರ್ಭದಲ್ಲಿ ನೇರವಾಗಿ ನಮಗೆ ಸಂವಿಧಾನವು ನೆರವಿಗೆ ಬರುತ್ತದೆ. ನಾವೆಲ್ಲರು ಇಂದು ಸಮಾನರಾಗಿ ಒಂದೆಡೆ ಸೇರಿ ನಿಂತಿದ್ದೇವೆ ಎಂದರೆ ಅದಕ್ಕೆ ಸಂವಿಧಾನವೇ ಮೂಲಕಾರಣವಾಗಿದೆ. ಅಂತಹ ಅದ್ಭುತ ಸಂವಿಧಾನ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯಬೇಕು. ಅವರು ಹೇಳಿದ ಆದರ್ಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ ಅವರು ಮಾತನಾಡಿ, ಡಾ.

ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

16-04-2024 – ಮಂಗಳವಾರ

ತಿಥಿ	: ಅಷ್ಟಮಿ
ಪಕ್ಷ	: ಶುಕ್ಲ
ನಕ್ಷತ್ರ	: ಪುಷ್ಯ
ಯೋಗ	: ಧೃತಿ
ಕರಣ	: ಭವ
ಸೂರ್ಯೋದಯ	: 06:06:27
ಸೂರ್ಯಾಸ್ತ	: 18:47:05
ರಾಹು	: 15:37–17:12
ಯಮಘಂಡ	: 09:17–10:52
ಗುಳಿಕ	: 12:27–14:02

ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 15-04-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1578.88 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	162 ಕ್ಯುಸೆಕ್
ಇಂದಿನ ಸಾಮರ್ಥ್ಯ	3.950 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಇಂದಿನ ಮಟ್ಟ	1577.09 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	262 ಕ್ಯುಸೆಕ್
ಸಾಮರ್ಥ್ಯ	3.217 ಟಿಎಂಸಿ

ಜ್ಞಾನ ಹಂಚಿಕೆಗೆ ಕನ್ನಡ ವಿವಿ ಮತ್ತು ಯುಎಸ್‌ಎ ಸಂಸ್ಥೆ ಜೊತೆ ಒಡಂಬಡಿಕೆ

ಸ್ಥಳೀಯ ಜ್ಞಾನ ಜಗತ್ತಿಗೆ ಪರಿಚಯಿಸಿ

ಜ್ಞಾನ ಸಂಪತ್ತು ಜನಸಾಮಾನ್ಯರಿಗೂ ಮುಕ್ತವಾಗಿ ದೊರೆಯುವಂತಾಗಲಿ

ಪಬ್ಲಿಕ್ ರಿಸೋರ್ಸ್ ಆರ್ಗ್ ಇಂಕ್ ಸಂಸ್ಥೆಯ ಅಧ್ಯಕ್ಷ ಕಾರ್ಲ ಮಲಮದ್ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಜ್ಞಾನ ನಾಗರೀಕತೆಯ ತಳಹದಿ. ಜ್ಞಾನ ಮುಕ್ತವಾಗಿ ಎಲ್ಲರಿಗೂ ಎಲ್ಲಡೆಯೂ ದೊರೆಯುವಂತಾಗಬೇಕು. ನಮ್ಮಲ್ಲಿನ ಅಮೂಲ್ಯ ಜ್ಞಾನ ಸಂಪತ್ತನ್ನು ಡಿಜಿಟಲೈಜೇಶನ್ ಮೂಲಕ ಜಗತ್ತಿನ ಮುಂದೆ ತೆರೆದಿಡಲು ಸಾಧ್ಯ ಎಂದು ಪಬ್ಲಿಕ್ ರಿಸೋರ್ಸ್ ಆರ್ಗ್ ಇಂಕ್ ಸಂಸ್ಥೆಯ ಅಧ್ಯಕ್ಷ ಕಾರ್ಲ ಮಲಮದ್ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ರಾಜಕುಮಾರ ಸಭಾಂಗಣದಲ್ಲಿ ಸೋಮವಾರ ವಿಜ್ಞಾನಗಳ ಇತಿಹಾಸ ವಿಭಾಗದಿಂದ ಆಯೋಜಿಸಿದ್ದ ಜ್ಞಾನ ಸತ್ಯಾಗ್ರಹ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಗ್ರಂಥಾಲಯಗಳು ಸ್ವಯಂ ಅಧ್ಯಯನದ ಕೇಂದ್ರಗಳು. ಇವು ಜೀವನ ಪರ್ಯಾಂತ ಓದುಗರ ಮಾರ್ಗದರ್ಶಿಯಂತೆ ಕೆಲಸ ಮಾಡುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಜನ ಸಾಮಾನ್ಯರಿಗೆ ಗ್ರಂಥಾಲಯದ ಮಹತ್ವ ತಿಳಿಸಿ, ಶಿಕ್ಷಣ ನೀಡುವುದು ನಮ್ಮ ಆದ್ಯ ಕರ್ತವ್ಯ. ಜ್ಞಾನಾರ್ಜನೆಗಾಗಿ ಮಹಾತ್ಮ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರು ಗ್ರಂಥಾಲಯವನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದರು. ಆದರೆ ಇಂದು ಎಲ್ಲವೂ ಆನ್‌ಲೈನ್ ಮೂಲಕವೇ ದೊರೆಯುತ್ತಿದ್ದು, ಭೌತಿಕ ಗ್ರಂಥಾಲಯಗಳ ಬಳಕೆಯ ಪ್ರಮಾಣ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷೆಗಳಲ್ಲಿರುವ ಸ್ಥಳೀಯ ಜ್ಞಾನ ಸಂಪತ್ತನ್ನು ಜಗತ್ತಿಗೆ ಪರಿಚಯಿಸುವಲ್ಲಿ ಡಿಜಿಟಲೀಕರಣ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಸರ್ವೆಂಟ್ಸ್ ಆಫ್ ನಾಲೆಡ್ಜ್ ಮೂಲಕ ಈಗಾಗಲೇ ಹಲವಾರು ಗ್ರಂಥಾಲಯಗಳಲ್ಲಿನ ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು ಮತ್ತು ಪತ್ರಿಕೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಗಾಂಧೀಜಿ ಯವರು ದೇಶದ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಚಳುವಳಿಯನ್ನು ನಡೆಸಿದರು. ಹಾಗೆಯೇ ನಾವು ಪ್ರಸ್ತುತ ದಿನಗಳಲ್ಲಿ ಜ್ಞಾನ ಸತ್ಯಾಗ್ರಹದ ಮೂಲಕ ಜ್ಞಾನವನ್ನು ಜನ ಸಾಮಾನ್ಯರಿಗೆ ಉಚಿತವಾಗಿ ದೊರೆಯುವಂತೆ ಮಾಡುವುದು ಇಂದಿನ ತುರ್ತು ಅಗತ್ಯ ಎಂದು ತಿಳಿಸಿದರು.

ಕನ್ನಡ ವಿವಿ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಮಾತನಾಡಿ, ಅಂಗೈಯಲ್ಲಿ ಕನ್ನಡ ವಿಚಾರಗಳು ಸಾರ್ವಜನಿಕಗೊಂಡಾಗ ಕನ್ನಡದ ಮಹತ್ವ ಜಗತ್ತಿಗೆ ಪರಿಚಯವಾಗುತ್ತಿದೆ. ಈ ನಿಟ್ಟಿನಲ್ಲಿ ಕನ್ನಡದ ಪಠ್ಯ-ಪುಸ್ತಕಗಳು, ಗ್ರಂಥಗಳನ್ನು, ನಿಯತಕಾಲಿಕೆಗಳನ್ನು ಮತ್ತು ಪತ್ರಿಕೆಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ಕನ್ನಡದ ಕೆಲಸ ಸಬಲೀಕರಣ ವಾಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ಪಬ್ಲಿಕ್ ರಿಸೋರ್ಸ್ ಆರ್ಗ್ ಇಂಕ್ ಕ್ಯಾಲಿಫೋರ್ನಿಯ ಯುಎಸ್‌ಎ ಸಂಸ್ಥೆಯ ಜೊತೆಗೆ ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಗ್ರಂಥಗಳನ್ನು, ಹಸ್ತಪ್ರತಿಗಳನ್ನು, ಶಾಸನಗಳನ್ನು ಒಟ್ಟಾರೆಯಾಗಿ ಕನ್ನಡದ ಜ್ಞಾನ ಸಂಪತ್ತನ್ನು ಡಿಜಟಲೀಕರಣದ ಮೂಲಕ ಜಗತ್ತಿಗೆ ಮುಕ್ತವಾಗಿ ಮಾಹಿತಿ ದೊರೆಯುವಂತೆ ಮಾಡಲು ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಮಾತನಾಡಿ, ಜ್ಞಾನಕ್ಕೆ ಭಾಷೆ ತೊಡುಕಾಗಬಾರದು. ಜ್ಞಾನವು ಭಾಷೆಯನ್ನು ಮೀರಿ ಹೋಗಬೇಕು. ಜ್ಞಾನವನ್ನು ಎಲ್ಲರಿಗೂ ಎಲ್ಲಡೆಯೂ ಉಚಿತವಾಗಿ ಸಿಗುವಂತೆ ಮಾಡುವಲ್ಲಿ ಡಿಜಿಟಲೀಕರಣದ ಪಾತ್ರ ಮಹತ್ತರವಾದುದು. ಡಿಜಿಟಲೀಕರಣ ದಿಂದ ಕಾಪಿರೈಟ್ ಮತ್ತು ಜ್ಞಾನ ಸತ್ಯಾಗ್ರಹದ ನಡುವೆ ಸಂಘರ್ಷವೂ ಇದೆ. ಮನುಷ್ಯ ಪ್ರಕೃತಿಯ ಕೂಸು. ಮನುಷ್ಯನ ಮನಸ್ಸಿನಲ್ಲಿನ ಆಲೋಚನೆಗಳು ಕೂಡ ಪ್ರಕೃತಿಗೆ ಸೇರಿದ್ದು. ಜ್ಞಾನ ಎಲ್ಲರ ಸ್ವತ್ತು. ಹೀಗಾಗಿ ಇಂದು ಜ್ಞಾನದ ಹಕ್ಕು ಸ್ವಾಮ್ಯವನ್ನು ಸಾರ್ವಜನಿಕಗೊಳಿಸಬೇಕು. ಮುಂದಿನ ದಿನಮಾನಗಳಲ್ಲಿ ಜ್ಞಾನವೂ ಕೂಡ ಮನುಷ್ಯನ ಮೂಲಭೂತ ಹಕ್ಕಾಗಿ ರೂಪುಗೊಳ್ಳಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಿಜ್ಞಾನಗಳ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಶೈಲಜ ಇಂ. ಹಿರೇಮಠ ಸ್ವಾಗತಿಸಿದರು. ಸರ್ವೆಂಟ್ಸ್ ಆಫ್ ನಾಲೆಡ್ಜ್ ಸಂಸ್ಥೆಯ ಸಹ ಸಂಸ್ಥಾಪಕರಾದ ಓಂಶಿವಪ್ರಕಾಶ್ ಹಾಗೂ ವಿಶ್ವವಿದ್ಯಾಲಯದ ಬೋಧಕರು ಚರ್ಚೆಯಲ್ಲಿ ಭಾಗವಹಿಸಿದ್ದರು. ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.

ಉತ್ತರಾದಿ ಮಠಕ್ಕೆ ದಲಿತರ ಪ್ರವೇಶ ಮಠದ ಅರ್ಚಕರಿಂದ ಸ್ವಾಗತ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ದಲಿತ ಮುಖಂಡರು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ನಿಮಿತ್ತ ಸಂವಿಧಾನ ಹೋರಾಟ ಸಮಿತಿ ನೇತೃತ್ವದಲ್ಲಿ ನಗರದ ಸ್ಟೇಷನರ್ ರಸ್ತೆಯಲ್ಲಿರುವ ಉತ್ತರಾದಿಮಠಕ್ಕೆ ಭಾನುವಾರ ಪ್ರವೇಶ ಮಾಡಿದರು.

ಬ್ರಾಹ್ಮಣ ಸಂಘದ ಅಧ್ಯಕ್ಷ ದಿವಾಕರ್ ನೇತೃತ್ವದಲ್ಲಿ ಮಠದ ಅರ್ಚಕರು ಸ್ವಾಗತಿಸಿ, ದೇವರಿಗೆ ಅರ್ಚನೆ, ಮಂಗಳಾರತಿ ನೀಡಿದರು. ಸಂವಿಧಾನ ಹೋರಾಟ ಸಮಿತಿ ಮುಖಂಡ ಹಾಗೂ ವಕೀಲ ಎ.ಕರುಣಾನಿಧಿ ಮಾತನಾಡಿ, ಅಂಬೇಡ್ಕರ್ ಅವರು ಶ್ರೇಷ್ಠ ಸಂವಿಧಾನ ನೀಡಿ, ಸಮಾನತೆ ಸಾರಿದ್ದಾರೆ. ಅಂಬೇಡ್ಕರ್ ಜನ್ಮದಿನದ ನಿಮಿತ್ತ ಸೌಹಾರ್ದ ಮೂಡಲೆಂದು ಮಠದ ಪ್ರವೇಶ ಮಾಡಿದ್ದು, ಮಠದವರೂ ಆದರದಿಂದ ಬರಮಾಡಿಕೊಂಡಿದ್ದಾರೆ. ನಮ್ಮ ಮನಸ್ಸುಗಳು ಒಂದಾಗಬೇಕು. ನಾವೆಲ್ಲ ಸಮಾಜಕ್ಕೆ ಉತ್ತಮ ಸಂದೇಶ ನೀಡೋಣ, ಶಾಂತಿ-ಸಹಬಾಳ್ವೆಯಿಂದ ಜೀವಿಸಿ ಮಾದರಿಯಾಗೋಣ ಎಂದರು.

ಬ್ರಾಹ್ಮಣ ಸಂಘದ ಅಧ್ಯಕ್ಷ ದಿವಾಕರ್ ಮಾತನಾಡಿ, ನಗರದಲ್ಲಿ ಎಲ್ಲಾ ಸಮಾಜದೊಂದಿಗೆ ಎಲ್ಲರೂ ಸೌಹರ್ದತೆಯಿಂದ ಇದ್ದಾರೆ. ಹೊಸಪೇಟೆಯ ಊರಮ್ಮ ದೇವಿ ಜಾತ್ರೆಯನ್ನು ನಮ್ಮೂರ ಹಬ್ಬದಂತೇ ಎಲ್ಲರೂ ಕೂಡಿ ಆಚರಣೆ ಮಾಡಿದ್ದೇವೆ. ನಗರದಲ್ಲಿ ಎಂದಿಗೂ ಸೌಹಾರ್ದಕ್ಕೆ ಧಕ್ಕೆಯಾಗಿಲ್ಲ ಎಂದರು.

ಸಂವಿಧಾನ ಹೋರಾಟ ಸಮಿತಿಯ ಮುಖಂಡರಾದ ಆರ್. ಭಾಸ್ಕರ್ ರೆಡ್ಡಿ, ವಿ. ಸ್ವಾಮಿ, ಮರಡಿ ಜಂಬಯ್ಯನಾಯ್ಕ, ರಮೇಶ್, ಪವನ್, ಎನ್.ಯಲ್ಲಾಲಿಂಗ, ಬಿಸಾಟಿ ಮಹೇಶ್, ಮಠದ ಉಮರ್ಜಿ ರಾಮಾಚಾರ್ಯ, ಆನಂದಾಚಾರ್ಯ ಮಹಿಷಿ, ವ್ಯವಸ್ಥಾಪಕ ಕೃಷ್ಣಾಚಾರ್ಯ ಇತರರಿದ್ದರು.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

ಎಂ.ಬಿ.ಕುರುವತ್ತಿ ಗೌಡರು ನಿಧನ

ಹೊಸಪೇಟೆ: ವೀರಶೈವ ಲಿಂಗಾಯತ ಸಮಾಜದ ಹಿರಿಯರು,ಮಾಜಿ ಸೈನಿಕರಾದ ಎಂ.ಬಿ.ಕುರುವತ್ತಿ ಗೌಡರು(78) ಇವರು ಸೋಮವಾರ ಬೆಳಗಿನ ಜಾವ 3.30ಕ್ಕೆ ನಿಧನರಾದರು. ನಗರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಸೋಮವಾರ ಸಂಜೆ ಮೃತರ ಅಂತ್ಯ ಕ್ರಿಯೆ ನರೆವೇರಿತು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವಿದೆ..

ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ

ಹಂಪಿ ಟೈಮ್ಸ್ ಬಳ್ಳಾರಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಬಳ್ಳಾರಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿಗೆ 2023-24 ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಶೇ.100 ರಷ್ಟು ಫಲಿತಾಂಶ ಲಭಿಸಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ತರಗತಿ ವಿಭಾಗ: ವಿಜ್ಞಾನ ವಿಭಾಗ: ಹಾಜರಾದ ವಿದ್ಯಾರ್ಥಿಗಳು 47, ಉತ್ತೀರ್ಣರಾದ ವಿದ್ಯಾರ್ಥಿಗಳು 47, ಅದರಲ್ಲಿ 21 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 25 ವಿದ್ಯಾರ್ಥಿಗಳು ಪ್ರಥಮ ದರ್ಜೆ ಮತ್ತು 01 ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ. ವಾಣಿಜ್ಯ ವಿಭಾಗ: ಹಾಜರಾದ ವಿದ್ಯಾರ್ಥಿಗಳು 33, ಉತ್ತೀರ್ಣರಾದ ವಿದ್ಯಾರ್ಥಿಗಳು 33, ಅದರಲ್ಲಿ 18 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 15 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣಗೊಂಡಿದ್ದಾರೆ.

ಕಾಲೇಜಿಗೆ ಶೇ.100 ಕ್ಕೆ 100 ರಷ್ಟು ಫಲಿತಾಂಶ ಸಾಧಿಸಲು ಶ್ರಮಿಸಿದ ವಸತಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯವರಿಗೆ ಅಭಿನಂದಿಸಿದ್ದಾರೆ.

ಬಳ್ಳಾರಿ (ಪ.ಪಂ) ಲೋಕಸಭಾ ಸಾರ್ವತ್ರಿಕ ಚುನಾವಣೆ: ಒಂದು ನಾಮಪತ್ರ ಸಲ್ಲಿಕೆ

ಹಂಪಿ ಟೈಮ್ಸ್ ಬಳ್ಳಾರಿ

09-ಬಳ್ಳಾರಿ (ಪ.ಪಂ) ಲೋಕಸಭಾ ಸಾರ್ವತ್ರಿಕ ಚುನಾವಣೆ 2024 ರ ಅಂಗವಾಗಿ ಸೋಮವಾರದಂದು ಕೆ.ಆರ್.ಎಸ್ ಪಕ್ಷದ ಅಭ್ಯರ್ಥಿಯಾಗಿ ಸಿ.ಚನ್ನವೀರ ಅವರು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರಿಗೆ ನಾಮಪತ್ರ ಸಲ್ಲಿಸಿದರು.

ಚುನಾವಣೆಗೆ ಅಧಿಸೂಚನೆ ಪ್ರಕಟವಾದ ಏ. 12 ರಂದು ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಏ.15 ಸೋಮವಾರದಂದು ಓರ್ವ ಅಭ್ಯರ್ಥಿಯಿಂದ ನಾಮಪತ್ರ ಸಲ್ಲಿಕೆಯಾಗಿದ್ದು, ಇದುವರೆಗೆ ಐವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದಂತಾಗಿದೆ.

ನಾಮಪತ್ರ ಸಲ್ಲಿಸಲು ಏಪ್ರಿಲ್ 19 ಕೊನೆ ದಿನವಾಗಿದ್ದು, ಏಪ್ರಿಲ್ 20 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏಪ್ರಿಲ್ 22 ರಂದು ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿದೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಡಿಸಿ ತಿಳಿಸಿದ್ದಾರೆ.

ಜಗತ್ತಿನ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತೀಯ ಸಂವಿಧಾನ ಶ್ರೇಷ್ಠ

ನಗರಸಭೆ ಬಿಜೆಪಿ ಸದಸ್ಯ ತಾರಿಹಳ್ಳಿ ಜಂಬುನಾಥ ಹೇಳಿಕೆ



■ ಹಂಪಿ ಟೈಮ್ಸ್ ಹೊಸಪೇಟೆ

ಜಗತ್ತಿನಲ್ಲಿ ಅನೇಕ ಪ್ರಜಾಪ್ರಭುತ್ವ ರಾಷ್ಟ್ರಗಳು ತಮ್ಮದೇ ಆದ ಮಾದರಿಯಲ್ಲಿ ಸಂವಿಧಾನಗಳನ್ನು ಹೊಂದಿವೆ. ಅವುಗಳಲ್ಲಿ ಭಾರತೀಯ ಸಂವಿಧಾನವೇ ಶ್ರೇಷ್ಠ ಎಂದು ನಗರಸಭೆ ಬಿಜೆಪಿ ಸದಸ್ಯ ತಾರಿಹಳ್ಳಿ ಜಂಬುನಾಥ ಹೇಳಿದರು.

ನಗರದ 31ನೇ ವಾರ್ಡ್, ಬಲ್ಡೋಟಾ ಉದ್ಯಾನವನದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ 133ನೇ ಜಯಂತೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ರಾಷ್ಟ್ರ ಪ್ರೇಮ, ಸಂವಿಧಾನದ ಮಹತ್ವ ತಿಳಿಸುತ್ತ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸುವ ಮೂಲಕ ಮೋದಿಜೀಯನ್ನು ಮತ್ತೊಮ್ಮೆ ದೇಶದ ಪ್ರಧಾನಿಯನ್ನಾಗಿಸಬೇಕು. ಡಾ.ಬಿ.ಆರ್. ಅಂಬೇಡ್ಕರ್ ರಚಿತ ಸಂವಿಧಾನವನ್ನು ಪುನಃ ಅವರೇ ಬಂದರೂ ಬದಲಾವಣೆ ಅಸಾಧ್ಯ ಎಂಬುದನ್ನು ಪ್ರಧಾನಿ ಅವರು ಈಗಾಗಲೇ ಸ್ಪಷ್ಟವಾಗಿ ದೇಶದ ಜನತೆಗೆ ತಿಳಿಸಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಸ್ಥಳೀಯ ಹಿರಿಯ ನಾಗರೀಕರಾದ ಶ್ರೀಕೃಷ್ಣ ಕುಲಕರ್ಣಿ ಮಾತನಾಡಿ, ಡಾ. ಅಂಬೇಡ್ಕರ್ ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೂ ಮಾರ್ಗದರ್ಶನ ಮಾಡಿದಾಗ ಅವರ ಜಯಂತಿ ಆಚರಣೆಗೆ ಮಹತ್ವ ಬರುತ್ತದೆ ಎಂದರು.

ಹಿರಿಯ ಮುಖಂಡ ಶಿವಮೂರ್ತಿ ಮಾತನಾಡಿ, ಡಾ. ಬಾಬಾಸಾಹೆಬ ಅಂಬೇಡ್ಕರ್ ಅವರ ಜೀವನ ಸಂಕ್ಷಿಪ್ತವಾಗಿ ಪರಿಚಯಿಸಿದರು

ಸಮಾರಂಭದಲ್ಲಿ ಸ್ಥಳೀಯರಾದ ಸರ್ವಶ್ರೀ ಕಟ್ಟೆ ಬಸಪ್ಪ, ಶಿವಾನಂದ ಕೆಂಭಾವಿಮಠ, ವಸಂತ, ಮರಡಿ, ಪರಮೇಶಿ, ಶ್ರೀಧರ, ಮಂಜುಳಾ ಹಾಗೂ ಶ್ರೀ ಬಸವೇಶ್ವರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮಕ್ಕಳು ಪಾಲ್ಗೊಂಡಿದ್ದರು.

ನಮ್ಮ ಮತ ನಮ್ಮ ಹಕ್ಕು

ಚೆಕ್‌ಪೋಸ್ಟಗೆ ಸಿಇಓ ಭೇಟಿ; ಪರಿಶೀಲನೆ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಏಪ್ರೀಲ್ 13ರಂದು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಗರಗ ನಾಗಲಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗರಗ ಗ್ರಾಮದಲ್ಲಿನ ಮತಗಟ್ಟೆ ಕೇಂದ್ರಕ್ಕೆ ತೆರಳಿ ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು. ಮತಗಟ್ಟೆ ಕೇಂದ್ರದಲ್ಲಿನ ವಿದ್ಯುತ್, ಕುಡಿಯುವ ನೀರು, ಶೌಚಾಲಯ ಸೇರಿದಂತೆ ನಾನಾ ವ್ಯವಸ್ಥೆಯನ್ನು ಪರಿಶೀಲಿಸಿದರು.

ಬಳಿಕ ಗರಗ-ನಾಗಲಾಪುರ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು. ಚೆಕ್‌ಪೋಸ್ಟನಲ್ಲಿ

ವಾಹನಗಳ ತಪಾಸಣೆಯನ್ನು ನಿಯಮಿತವಾಗಿ ನಡೆಸಬೇಕು ಎಂದು ಇದೆ ವೇಳೆ ಸಿಇಓ ಅವರು ಚೆಕ್‌ಪೋಸ್ಟ್‌ನಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಗೆ ಸೂಚನೆ ನೀಡಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vij